# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಮಾರ್ಚ್ ೨ನೇ ವಾರ**

09-03-2026 TO 14-03-2026

**ಟಿ20 ಕ್ರಿಕೆಟ್: ಭಾರತ ವಿಶ್ವವಿಜೇತ**

- ಇವಿಎಂ ಬದಲು ಇನ್ನು ಮತಪತ್ರ
- ರಾಜ್ಯದೆಲ್ಲೆಡೆ ಕಂಬಳಕ್ಕೆ ಅನುಮತಿ
- ದಯಾಮರಣಕ್ಕೆ ಅನುಮತಿ
- ಪ್ಯಾರಾ ಅಥ್ಲೆಟಿಕ್ಸ್: ಪಾಲ್ ಗೆ ಚಿನ್ನ



# ಟಿ20 ಕ್ರಿಕೆಟ್: ಭಾರತ ವಿಶ್ವವಿಜೇತ

## ತವರಿನಲ್ಲಿ ಕಿರೀಟ ಗೆದ್ದ ಮೊದಲ ತಂಡ; ಸತತ ಎರಡನೇ ಬಾರಿ ಚಾಂಪಿಯನ್

ಆಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

Publication Date 09/03/2026

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಭಾರತ ತಂಡವು ಚುಟುಕು ಮಾದರಿಯ ಕ್ರಿಕೆಟ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿತು.

ಭಾನುವಾರ ರಾತ್ರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 'ನೀಲಿ ಸಾಗರ'ದಂತೆ ಕಂಗೊಳಿಸಿದ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಮುಗಿಲು ಮುಟ್ಟಿತು. ಸೂರ್ಯ ಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ನ್ಯೂಜಿಲೆಂಡ್ ಎದುರು 96 ರನ್‌ಗಳಿಂದ ಜಯಿಸುವುದರೊಂದಿಗೆ ತ್ರಿವರ್ಣ ಧ್ವಜಗಳು ರಾರಾಜಿಸಿದವು. 2023ರಲ್ಲಿ ಇದೇ ಮೈದಾನದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತವು ಅನುಭವಿಸಿದ್ದ ಸೋಲಿನ ಕಹಿಯನ್ನು ಮರೆಯಲು ಈ ಜಯ ಕಾರಣವಾಯಿತು.

ಇದರೊಂದಿಗೆ ಮೂರು ಐತಿಹಾಸಿಕ ದಾಖಲೆಗಳನ್ನೂ ಮಾಡಿತು. ಅವುಗಳೆಂದರೆ- ಸತತ ಎರಡನೇ ಬಾರಿ ವಿಶ್ವಕಪ್ ಜಯಿಸಿತ್ತು. ಚುಟುಕು ಮಾದರಿ ಯಲ್ಲಿ ವಿಶ್ವಕಪ್ ಜಯಿಸಿದ ಮೊದಲ ಆತಿಥೇಯ ತಂಡವೆನಿಸಿತು. ಮೂರನೇ ಸಲ ಚಾಂಪಿಯನ್ ಪಟ್ಟಕ್ಕೇರಿದ ಮೊದಲ ಬಳಗವೆಂಬ ಹೆಗ್ಗಳಿಕೆಗೂ ಪಾತ್ರವಾಯಿತು.

2007ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಚುಟುಕು ವಿಶ್ವಕಪ್‌ನ ಮೊದಲ ಆವೃತ್ತಿಯಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಬಳಗ ಮತ್ತು 2024ರಲ್ಲಿ ಅಮೆರಿಕ-ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ರೋಹಿತ್ ಶರ್ಮಾ ಪಡೆಯು ಚಾಂಪಿಯನ್ ಆಗಿತ್ತು.

ನ್ಯೂಜಿಲೆಂಡ್ ತಂಡದ ಎದುರಿನ ಫೈನಲ್ ಏಕಪಕ್ಷೀಯವಾಯಿತು. ಟಾಸ್ ಗೆದ್ದ ಕಿವೀಸ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ನಾಯಕ ಮಿಚೆಲ್ ಸ್ಯಾಂಟ್ನರ್ ಲೆಕ್ಕಾಚಾರವನ್ನು ಆತಿಥೇಯ ತಂಡದ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ (52; 21ಎ, 4X6, 6X3) ಮತ್ತು ಸಂಜು ಸ್ಯಾಮ್ಸನ್ (89; 46ಎ, 4X5, 6X8) ತಲೆಕೆಳಗು ಮಾಡಿದರು. ಪವರ್‌ಪ್ಲೇನಲ್ಲಿಯೇ ಇಬ್ಬರೂ ಸೇರಿ ದಾಖಲೆಯ 92 ರನ್ ಸೂರೆ ಮಾಡಿದರು. ಅಭಿಷೇಕ್ ಔಟಾದ ನಂತರ ಕ್ರೀಸ್‌ಗೆ ಬಂದ ಇಶಾನ್ ಕಿಶನ್ (54; 25ಎಸೆತ, 4X4, 6X4) ಅವರು ಸಂಜು ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ ಮಿಂಚಿನ ವೇಗದಲ್ಲಿ 105 ರನ್ ಗಳಿಸಿದರು. ಕೊನೆಯ ಓವರ್‌ಗಳಲ್ಲಿ ಶಿವಂ ದುಬೆ ಮಿಂಚಿದರು. 256 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಕಿವೀಸ್ ಬಳಗದ ಪರ ಆರಂಭಿಕ ಬ್ಯಾಟರ್ ಟಿಮ್ ಸೀಫರ್ಟ್ (52; 26ಎ) ಮತ್ತು ನಾಯಕ ಮಿಚೆಲ್ ಸ್ಯಾಂಟ್ನರ್ (43; 35ಎ) ಅವರಷ್ಟೇ ಒಂದಿಷ್ಟು ಹೋರಾಟ ತೋರಿದರು. ಉಳಿದಂತೆ ಭಾರತದ ಬೌಲರ್‌ಗಳದ್ದೇ ಕಾರುಬಾರು ನಡೆಯಿತು.

ನಾಯಕ ಸೂರ್ಯ ಅವರ ಬೌಲಿಂಗ್ ಮತ್ತು ಫೀಲ್ಡಿಂಗ್ ತಂತ್ರಗಾರಿಕೆಗಳು ಫಲ ನೀಡಿದವು. 'ಸ್ಥಳೀಯ ಹೀರೊ' ಅಕ್ಷರ್ ಪಟೇಲ್ (27ಕ್ಕೆ3), ವೇಗಿ ಜಸ್‌ಪ್ರೀತ್ ಬೂಮ್ರಾ (13ಕ್ಕೆ4) ಅವರ ದಾಳಿಯ ಮುಂದೆ ಕಿವೀಸ್ ತಂಡದ ಚೊಚ್ಚಲ ಪ್ರಶಸ್ತಿ ಗೆಲುವಿನ ಕನಸು ಕಮರಿತು.

₹27.48 ಕೋಟಿ ವಿಶ್ವಕಪ್ ಗೆದ್ದ ಭಾರತ ಪಡೆದ ಬಹುಮಾನ

₹14.65 ಕೋಟಿ ರನ್ನರ್ಸ್ ಅಪ್ ನ್ಯೂಜಿಲೆಂಡ್ ಪಡೆದ ಬಹುಮಾನ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026

| ಪಂದ್ಯದ ಸ್ಕೋರ್ |
|---|
| ಭಾರತ |
| 5ಕ್ಕೆ255 (20 ಓವರ್‌ಗಳಲ್ಲಿ) |
| ನ್ಯೂಜಿಲೆಂಡ್ |
| 159 (19 ಓವರ್‌ಗಳಲ್ಲಿ) |
| ಫಲಿತಾಂಶ: ಭಾರತಕ್ಕೆ 96 ರನ್ ಗೆಲುವು |

Presented by

## ❖ 'ಕ್ವಾಂಟಮ್ ರೋಡ್‌ಮ್ಯಾಪ್‌ಗೆ ₹10 ಕೋಟಿ: ದಿಟ್ಟ ಹೆಜ್ಜೆ'

**ಸಂದರ್ಭ: 'ಕ್ವಾಂಟಮ್ ರೋಡ್ ಮ್ಯಾಪ್‌ನ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ₹10 ಕೋಟಿ ಘೋಷಿಸಿರುವುದು, ಕರ್ನಾಟಕ ರಾಜ್ಯವನ್ನು ಕ್ವಾಂಟಮ್ ಕ್ಷೇತ್ರದ ಕೇಂದ್ರವಾಗಿ ಮಾಡುವ ಹಾದಿಯಲ್ಲಿ ಸರ್ಕಾರದ ದಿಟ್ಟ ಹೆಜ್ಜೆಯಾಗಿದೆ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.**

- 'ಬೆಂಗಳೂರು ಕ್ವಾಂಟಮ್ ಶೃಂಗಸಭೆಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ₹1 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು. ಮೊದಲ ಹಂತದ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಅವರು ₹10 ಕೋಟಿ ನೀಡಿದ್ದಾರೆ. ಭವಿಷ್ಯದ ಈ ವಲಯವನ್ನು ಮುಂದಿನ ಐದು ವರ್ಷಗಳಲ್ಲಿ ಮುನ್ನಡೆಸಲು ಅಗತ್ಯವಿರುವ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವತ್ತ ಈ ರೋಡ್ ಮ್ಯಾಪ್ ಗಮನ ಹರಿಸಲಿದೆ' ಎಂದಿದ್ದಾರೆ.
- 'ಬೆಂಗಳೂರು ನಗರವು ಈಗಾಗಲೇ ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ನವೋದ್ಯಮಗಳ ಬಲಿಷ್ಠ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಅಗತ್ಯ ಮೂಲಸೌಕರ್ಯ ಮತ್ತು ನೀತಿಯನ್ನು ರೂಪಿಸುವ ಮೂಲಕ 2035ರ ವೇಳೆಗೆ ಶೇ 20ರಷ್ಟು ಜಾಗತಿಕ ಮಾರುಕಟ್ಟೆ ಪಾಲನ್ನು ಸಾಧಿಸುವ ರಾಜ್ಯ ಸರ್ಕಾರದ ದೃಷ್ಟಿಕೋನಕ್ಕೆ ಈ ಬದ್ಧತೆಯು ಮತ್ತಷ್ಟು ಬಲ ತುಂಬಲಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.
- 'ಕ್ವಾಂಟಮ್ ಸಿಟಿ ನಿರ್ಮಾಣಕ್ಕಾಗಿ ಹೆಸರಘಟ್ಟದಲ್ಲಿ ಭೂಮಿಯನ್ನು ಸರ್ಕಾರ ಮಂಜೂರು ಮಾಡಿದೆ. ಐಐಎಸ್‌ಸಿಯಂತಹ ವಿಶ್ವದರ್ಜೆಯ ಸಂಸ್ಥೆಗಳು, ಸುಧಾರಿತ ಕ್ವಾಂಟಮ್ ಕಂಪ್ಯೂಟರ್‌ಗಳ ಲಭ್ಯತೆ ಮತ್ತು ನಮ್ಮ ರಾಜ್ಯದ ತಾಂತ್ರಿಕ ಮಾನವ ಸಂಪನ್ಮೂಲದಿಂದಾಗಿ, ಕರ್ನಾಟಕವು ಕ್ವಾಂಟಮ್ ತಂತ್ರಜ್ಞಾನದಲ್ಲಿ ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾಗಲಿದೆ' ಎಂದಿದ್ದಾರೆ.

| | | | | | |
|---|---|---|---|---|---|
| **3** ಕೋಟಿ ನೇಪಾಳದ ಜನಸಂಖ್ಯೆ | **1.9** ಕೋಟಿ ಮತದಾರರು | **80** ಲಕ್ಷ ಈ ಚುನಾವಣೆಗೂ ಮುನ್ನ ಮತದಾರರ ಪಟ್ಟಿಗೆ ಸೇರ್ಪಡೆಗೊಂಡಿದ್ದ ಯುವ ಮತದಾರರು | **60%** ಮಾರ್ಚ್ 5ರ ಚುನಾವಣೆಯಲ್ಲಿ ದಾಖಲಾದ ಮತದಾನದ ಪ್ರಮಾಣ | **275** 'ಪ್ರತಿನಿಧಿ ಸಭಾ'ದ (ಸಂಸತ್ತಿನ ಕೆಳ ಮನೆ) ಸದಸ್ಯ ಬಲ | **138** ಬಹುಮತಕ್ಕೆ ಬೇಕಾದ ಸ್ಥಾನಗಳು |



**ಪ್ರಧಾನಿ ಹುದ್ದೆ ಏರಲು ಸಜ್ಜಾದ ಯುವ ನಾಯಕ ಬಾಲೇಂದ್ರ ಶಾ**



# ನೇಪಾಳದಲ್ಲಿ ಯುವ ಶಕೆ

**ನೇಪಾಳದಲ್ಲಿ ಮಾರ್ಚ್ 5ರಂದು ನಡೆದ ಸಾರ್ವತ್ರಿಕ ಚುನಾವಣೆಯು ಅಲ್ಲಿನ ರಾಜಕೀಯದಲ್ಲಿ ಹೊಸ ಪಲ್ಲಟವನ್ನು ತಂದಿದೆ. ಅಲ್ಲಿನ ಮತದಾರರು ಹಳೆಯ ಪಕ್ಷಗಳನ್ನು ತಿರಸ್ಕರಿಸಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಸ್ಥಾಪನೆಯಾದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಯನ್ನು (ಆರ್‌ಎಸ್‌ಪಿ) ಬೆಂಬಲಿಸಿದ್ದಾರೆ. ಈ ಪಕ್ಷದ ನಾಯಕ, 35 ವರ್ಷ ವಯಸ್ಸಿನ ಬಾಲೇಂದ್ರ ಶಾ ಅವರು ಪ್ರಧಾನಿ ಹುದ್ದೆಗೇರುವುದು ಖಚಿತವಾಗಿದೆ. ರಾಜಕೀಯ ಪಕ್ಷಗಳ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ನಿರುದ್ಯೋಗ ಮುಂತಾದ ಗಂಭೀರ ಸಮಸ್ಯೆಗಳಿಂದ ಬೇಸತ್ತು ಕಳೆದ ವರ್ಷ ದಂಗೆ ಎದ್ದು ಸರ್ಕಾರದ ಸದ್ದಡಗಿಸಿದ್ದ ನೇಪಾಳದ 'ಜೆನ್ ಝೀ'ಗಳ ಆಶಯದಂತೆ ಜನರು ಈ ಚುನಾವಣೆಯಲ್ಲಿ ಹೊಸ ರಕ್ತಕ್ಕೆ, ಹೊಸ ರಾಜಕೀಯ ಪಕ್ಷಕ್ಕೆ, ಹೊಸ ಯೋಚನೆಗಳಿಗೆ ಮತ ಹಾಕಿದ್ದಾರೆ. ಚುನಾವಣಾ ಫಲಿತಾಂಶವು ಭಾರತದ ಪುಟ್ಟ ನೆರೆಯ ರಾಷ್ಟ್ರದ ಆಡಳಿತದಲ್ಲಿ ಸ್ಥಿರತೆ ತರುವ ನಿರೀಕ್ಷೆ ಹುಟ್ಟುಹಾಕಿದೆ**

ಪ್ರಜಾವಾಣಿ ವಾರ್ತೆ

2025ರ ಸೆಪ್ಟೆಂಬರ್ 9. ಹಿಮಾಲಯದ ಪುಟ್ಟ ರಾಷ್ಟ್ರ ನೇಪಾಳದ ಸಚಿವಾಲಯಗಳ ಕಟ್ಟಡದ ತುದಿಯಲ್ಲಿದ್ದ ಸರಳುಗಳಲ್ಲಿ ಮೂವರು ಯುವಕರು ನಿಂತುಕೊಂಡು ರಾಷ್ಟ್ರ ಧ್ವಜವನ್ನು ಬೀಸುತ್ತಾ ಸಂಭ್ರಮಿಸಿದ್ದರು. ಅಂದು ಅಸ್ತಿತ್ವದಲ್ಲಿದ್ದ ಸರ್ಕಾರವನ್ನು ಬಲವಂತದಿಂದ ಪತನಗೊಳಿಸಿದ್ದಕ್ಕೆ ಅವರಿಗಾದ ಸಂತೋಷ ಅದು. ಮಾರನೇ ದಿನ ಬಹುತೇಕ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಅದೇ ಫೋಟೊ ರಾರಾಜಿಸಿತ್ತು. ಸಾಮಾಜಿಕ ಜಾಲತಾಣಗಳ ಮೇಲೆ ಸರ್ಕಾರ ನಿರ್ಬಂಧ ವಿಧಿಸಿದ್ದನ್ನೇ ನೆಪವಾಗಿಟ್ಟುಕೊಂಡು 'ಜೆನ್–ಝೀ'ಗಳು ಬೀದಿಗಿಳಿದು ಆಡಳಿತದ ವಿರುದ್ಧ ದಂಗೆ ಎದ್ದು, ಕೆ.ಪಿ. ಶರ್ಮಾ ಓಲಿ ನೇತೃತ್ವದ ಮೈತ್ರಿ ಸರ್ಕಾರವನ್ನು ಪತನಗೊಳಿಸಿ, ಶರ್ಮಾ ಅವರನ್ನು ಪದಚ್ಯುತಿಗೊಳಿಸಿದ್ದು ಈಗ ಇತಿಹಾಸ.

ಸರ್ಕಾರದ ಸದ್ದಡಗಿಸಿದ, 79 ಜನರನ್ನು ಬಲಿ ಪಡೆದ ಆ 'ಯುವ ಕ್ರಾಂತಿ' ನಡೆದು ಏಳು ತಿಂಗಳುಗಳು ಕಳೆದಿವೆ. ಅಂದು ಯುವ ಜನಾಂಗ ಯಾವ ಉದ್ದೇಶ ಇಟ್ಟುಕೊಂಡು ಬೀದಿಗಿಳಿದಿದ್ದರೋ, ಅದೀಗ ನಿಜವಾಗುತ್ತಿರುವಂತೆ ಕಾಣುತ್ತಿದೆ. ಮಾರ್ಚ್ 5ರಂದು ನಡೆದ ಸಾರ್ವತ್ರಿಕ ಚುನಾವಣೆಯು ದೇಶದ ರಾಜಕೀಯ, ಆಡಳಿತದಲ್ಲಿ ಮಹತ್ವದ ಪಲ್ಲಟಕ್ಕೆ ದಾರಿ ಮಾಡಿಕೊಟ್ಟಿದೆ. ಈ ಚುನಾವಣೆಯಲ್ಲಿ ಮತದಾರರು ನೇಪಾಳದ ಹಳೆಯ ಪಕ್ಷಗಳನ್ನು (ನೇಪಾಳ ಕಾಂಗ್ರೆಸ್, ನೇಪಾಳ ಕಮ್ಯುನಿಸ್ಟ್ ಪಕ್ಷದ (ಸಿಪಿಎನ್–ಯುಎಂಎಲ್) ಅಧಿಕಾರದಿಂದ ದೂರ ಇಟ್ಟಿದ್ದಾರೆ. ನಾಲ್ಕು ವರ್ಷಗಳ ಹಿಂದೆಯಷ್ಟೇ ಸ್ಥಾಪನೆಗೊಂಡಿದ್ದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಗೆ (ಆರ್‌ಎಸ್‌ಪಿ) ಜನರು ಬಹುಪರಾಕ್ ಹೇಳಿದ್ದಾರೆ.

ಆರ್‌ಎಸ್‌ಪಿಯು ಸ್ಪಷ್ಟ ಬಹುಮತ ಪಡೆಯುವುದು ಖಾತ್ರಿಯಾಗಿದ್ದು, ಇದರ ನಾಯಕ, 35 ವರ್ಷ ವಯಸ್ಸಿನ ಬಾಲೇಂದ್ರ ಶಾ ಅಲಿಯಾಸ್ ಬಾಲನ್ ಶಾ ಅವರು ಪ್ರಧಾನಿ ಹುದ್ದೆಗೆ ಏರುವುದು ಖಚಿತವಾಗಿದೆ. ಆರ್‌ಎಸ್‌ಪಿ ಅಭ್ಯರ್ಥಿಯಾಗಿ ಝಾಪ–5 ಕ್ಷೇತ್ರದಿಂದ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ವಿರುದ್ಧ ಸ್ಪರ್ಧಿಸಿದ್ದ ಶಾ ಅವರು ಓಲಿ ಅವರನ್ನು ಭಾರಿ ಅಂತರದಿಂದ (49,614 ಮತಗಳು) ಮಣಿಸಿದ್ದಾರೆ. ಇದರೊಂದಿಗೆ ನೇಪಾಳದ ರಾಜಕೀಯದಲ್ಲಿ 'ಯುವ ಶಕೆ' ಆರಂಭವಾಗುವುದು ಸನ್ನಿಹಿತವಾಗಿದೆ. ಚುನಾವಣಾ ಫಲಿತಾಂಶವು ದೇಶದ ರಾಜಕೀಯ ಮತ್ತು ಆಡಳಿತದಲ್ಲಿ ಯುವ ರಕ್ತಕ್ಕೆ ಅವಕಾಶ ನೀಡಿದ್ದು, ಹೊಸ ಆಲೋಚನೆಗಳಿಗೂ ದಾರಿ ಮಾಡಿಕೊಟ್ಟಿದೆ. ರಾಜಕೀಯ ಅಸ್ಥಿರತೆಯಿಂದ ತತ್ತರಿಸಿದ್ದ ದೇಶದ ಆಡಳಿತದಲ್ಲಿ ಸ್ಥಿರತೆಯನ್ನು ತರುವ ನಿರೀಕ್ಷೆಯನ್ನೂ ಹುಟ್ಟುಹಾಕಿದೆ.

Publication Date
09/03/2026



ಬಾಲೇಂದ್ರ ಶಾ

## ಯಾರಿದು ಬಾಲೇಂದ್ರ ಶಾ?

ಬಾಲನ್ ಎಂದೇ ಖ್ಯಾತರಾಗಿರುವ ಬಾಲೇಂದ್ರ ಶಾ 2013ರವರೆಗೆ ಮುಖ್ಯವಾಹಿನಿಯಲ್ಲಿ ಇರಲಿಲ್ಲ. ಆದರೆ, ರ‍್ಯಾಪರ್ ಆಗಿದ್ದ ಅವರ ಒಂದು ಹಾಡು (ಸಡಕ್ ಬಾಲಕ್) ರಾತ್ರಿ ಬೆಳಗಾಗುವುದರೊಳಗೆ ಅವರನ್ನು ಸೆಲೆಬ್ರೆಟಿಯನ್ನಾಗಿ ಮಾಡಿತ್ತು. ಬೆಂಗಳೂರಿನ ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ಟ್ರಕ್ಚರಲ್ ಎಂಜಿನಿಯರಿಂಗ್ ಓದಿದ್ದ ಅವರು 2022ರಲ್ಲಿ ಸ್ವತಂತ್ರವಾಗಿ ಕಾಠ್ಮಂಡು ಮೇಯರ್ ಹುದ್ದೆಗೆ ಸ್ಪರ್ಧಿಸಿ ಗೆಲ್ಲುವುದರೊಂದಿಗೆ ಅಲ್ಲಿನ ರಾಜಕೀಯ ಪಕ್ಷಗಳಿಗೆ ಸಡ್ಡು ಹೊಡೆದಿದ್ದರು.

ಕಳೆದ ವರ್ಷದ ಯುವಜನರ ದಂಗೆಯನ್ನು ಬೆಂಬಲಿಸಿದ್ದರು. ಪ್ರಧಾನಿ ಓಲಿ ಅವರನ್ನು 'ಭಯೋತ್ಪಾದಕ' ಎಂದೂ ಜರೆದಿದ್ದರು. ದಂಗೆಯ ಸಂದರ್ಭದಲ್ಲಿ ಮಧ್ಯಂತರ ಸರ್ಕಾರ ರಚನೆಯಾಗುವಾಗಲೇ ದೇಶದ ಯುವಜನರು ಬಾಲನ್ ಅವರು ಪ್ರಧಾನಿಯಾಗಬೇಕು ಎಂದು ಆಗ್ರಹಿಸಿದ್ದರು. ಆದರೆ, ಈ ಪ್ರಸ್ತಾವವನ್ನು ನಿರಾಕರಿಸಿದ್ದ ಶಾ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕಾರ್ಕಿ ಅವರನ್ನು ಬೆಂಬಲಿಸಿದ್ದರು.

ಅಮೆರಿಕ, ಭಾರತ, ಚೀನಾ ವಿರೋಧಿ ನಿಲುವುಗಳನ್ನು ಹೊಂದಿರುವ ಅವರು, ರವಿ ಲಮಿಛಾನೆ ಅವರು 2022ರಲ್ಲಿ ಸ್ಥಾಪಿಸಿದ್ದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಯನ್ನೂ ಟೀಕಿಸಿದ್ದರು. ಆದರೆ, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಆರ್‌ಎಸ್‌ಪಿಗೆ ಸೇರ್ಪಡೆಗೊಂಡಿದ್ದರು. ಜನವರಿಯಲ್ಲಿ ಮೇಯರ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಮುಖ್ಯವಾಹಿನಿ ಮಾಧ್ಯಮಗಳಿಂದ ಅಂತರ ಕಾಯ್ದುಕೊಂಡು ಬಂದಿರುವ ಅವರು ಸಾಮಾಜಿಕ ಜಾಲತಾಣಗಳ ಮೂಲಕ ನೇಪಾಳದ ಕೋಟ್ಯಂತರ ಯುವ ಜನರನ್ನು ತಲುಪಿದ್ದಾರೆ. ದೇಶದ ಬಗ್ಗೆ, ಆಡಳಿತದ ಬಗ್ಗೆ ಯುವಜನರಲ್ಲಿ ಹೊಸ ಕನಸುಗಳನ್ನು ಬಿತ್ತುವುದರ ಮೂಲಕ ಈಗ ಪ್ರಧಾನಿ ಹುದ್ದೆಯನ್ನು ಏರಲು ಸಜ್ಜಾಗಿದ್ದಾರೆ.

### ಗೆಲುವಿಗೆ ಕಾರಣಗಳೇನು?

- 12 ಲಕ್ಷ ಉದ್ಯೋಗ ಸೃಷ್ಟಿಯ ಭರವಸೆ
- ಐದು ವರ್ಷಗಳ ಒಳಗಾಗಿ ನೇಪಾಳಿಗರ ತಲಾ ಆದಾಯವನ್ನು 1,447 ಡಾಲರ್‌ನಿಂದ 3,000 ಡಾಲರ್‌ಗೆ ಹೆಚ್ಚಿಸುವ ವಾಗ್ದಾನ
- ದೇಶದ ಆರ್ಥಿಕತೆಯನ್ನು 10 ಸಾವಿರ ಕೋಟಿ ಡಾಲರ್‌ಗೆ ಏರಿಸುವ ಗುರಿ
- ದೇಶದ ಎಲ್ಲ ನಾಗರಿಕರಿಗೂ ಆರೋಗ್ಯ ವಿಮೆಯಂತಹ ಯೋಜನೆಗಳ ಘೋಷಣೆ

## ಮೈತ್ರಿ, ಅಸ್ಥಿರತೆ, ಜನರ ಆಕ್ರೋಶ

2008ರಲ್ಲಿ ನೇಪಾಳದಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂತು. ಆರಂಭದಿಂದಲೂ ಆಡಳಿತದಲ್ಲಿ ಸ್ಥಿರತೆ ಎಂಬುದು ಇರಲಿಲ್ಲ. ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಪರಸ್ಪರ ಮೈತ್ರಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದವು. ಈ ಪಕ್ಷಗಳ ನೇತೃತ್ವ ವಹಿಸಿದ್ದವರೆಲ್ಲರೂ ಹಿರಿಯ ರಾಜಕಾರಣಿಗಳು. ಭ್ರಷ್ಟಾಚಾರ, ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಮಕ್ಕಳು, ಕುಟುಂಬದ ಸದಸ್ಯರಿಗೆ ಅಧಿಕಾರ ನೀಡುವುದು ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ 40ರಷ್ಟು ಇರುವ 35 ವರ್ಷದೊಳಗಿನ ಯುವಕರಿಗೆ ಪಥ್ಯವಾಗಿರಲಿಲ್ಲ.

ಇದರೊಂದಿಗೆ, ಆಡಳಿತ ಪಕ್ಷಗಳ ಹಗರಣಗಳು, ಬಡತನ ಹೆಚ್ಚಳ, ದೇಶದ ಅರ್ಥವ್ಯವಸ್ಥೆ ಹದಗೆಡುತ್ತಿದ್ದುದು, ನಿರುದ್ಯೋಗ ಸಮಸ್ಯೆ ಇವೆಲ್ಲವೂ ಯುವ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿತ್ತು. ಇದರ ವಿರುದ್ಧ ಧ್ವನಿ ಎತ್ತಲು ಅವರು ಬಳಸಿಕೊಂಡಿದ್ದು ಸಾಮಾಜಿಕ ಮಾಧ್ಯಮಗಳನ್ನು. ಇದು ಆಡಳಿತಗಾರರ ಕಣ್ಣು ಕೆಂಪಾಗಿಸಿತ್ತು. ಓಲಿ ಸರ್ಕಾರ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಲು ಮುಂದಾಯಿತು. ಇದೊಂದೇ ನೆಪ, ಜೆನ್–ಝೀಗಳಿಗೆ 2025ರ ಸೆಪ್ಟೆಂಬರ್ 8ರಂದು ಬೀದಿಗೆ ಇಳಿಯಲು ಸಾಕಾಯಿತು. ಯುವ ಜನರ ಎರಡು ದಿನಗಳ ದಂಗೆ ಸರ್ಕಾರವೇ ಮಂಡಿಯೂರುವಂತೆ ಮಾಡಿತ್ತು.

## ಸುಧಾರಿಸುವುದೇ ಸಂಬಂಧ?

ಭಾರತ ಮತ್ತು ನೇಪಾಳ 1,751 ಕಿ.ಮೀನಷ್ಟು ಉದ್ದದ ಗಡಿ ಹಂಚಿಕೊಂಡಿವೆ. ಐತಿಹಾಸಿಕವಾಗಿ ಎರಡೂ ರಾಷ್ಟ್ರಗಳು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿವೆ.

ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಅಲ್ಲಿ ಚೀನಾದ ಪ್ರಭಾವ ಹೆಚ್ಚುತ್ತಿದೆ. ಅಲ್ಲಿನ ನಾಯಕರು, ಭಾರತದ ವಿರುದ್ಧವಾಗಿ ಮತ್ತು ಚೀನಾದ ಪರವಾಗಿ ಮಾತನಾಡಿದ್ದಾರೆ. ಗಡಿ ವಿಚಾರವಾಗಿಯೂ ಉಭಯ ದೇಶಗಳ ನಡುವೆ ಬಿಕ್ಕಟ್ಟು ಇದೆ. ಉತ್ತರಾಖಂಡದ ಕಲಾಪಾನಿ, ಲಿಪುಲೇಖ್, ಲಿಂಪ್ಯಾಧುರಾ ಪ್ರದೇಶಗಳು ತನಗೆ ಸೇರಿದ್ದೆಂದು ನೇಪಾಳ ಹೇಳುತ್ತಾ ಬಂದಿದೆ. 2020ರಲ್ಲಿ ಅದು ತನ್ನ ಪರಿಷ್ಕೃತ ಭೂಪಟವನ್ನು ಬಿಡುಗಡೆ ಮಾಡಿದ್ದು ಈ ಪ್ರದೇಶಗಳನ್ನು ಸೇರಿಸಿಕೊಂಡಿದೆ. ನೇಪಾಳದ ಆಂತರಿಕ ವಿಚಾರದಲ್ಲಿ ಭಾರತ ಮೂಗು ತೂರಿಸುತ್ತಿದೆ ಎಂಬ ಅಭಿಪ್ರಾಯ ಅಲ್ಲಿನವರಿಗಿದೆ.

ಈಗ ಪ್ರಧಾನಿಯಾಗಲು ಹೊರಟಿರುವ ಬಾಲೇಂದ್ರ ಶಾ ಅವರು ಭಾರತ ವಿರೋಧಿ ನಿಲುವನ್ನು ಹೊಂದಿದ್ದಾರೆ. 'ನೇಪಾಳ ಮೊದಲು' ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತಿರುವ ಅವರು 2023ರಲ್ಲಿ 'ಗ್ರೇಟರ್ ನೇಪಾಳ'ದ ಭೂಪಟವನ್ನು ಪ್ರದರ್ಶಿಸಿದ್ದರು. ಅದರಲ್ಲಿ ಭಾರತದ ಭೂಭಾಗವೂ ಸೇರಿತ್ತು. 'ಸೀತೆಯನ್ನು ಭಾರತದ ಮಗಳು' ಎಂದು ಪ್ರತಿಪಾದಿಸಿದ್ದ ಬಾಲಿವುಡ್ ಸಿನಿಮಾವೊಂದಕ್ಕೆ ನೇಪಾಳದಲ್ಲಿ ನಿರ್ಬಂಧ ವಿಧಿಸಬೇಕು ಎಂದೂ ಅವರು ಆಗ್ರಹಿಸಿದ್ದರು. ದಂಗೆಯ ನಂತರವೂ ಶಾ ಭಾರತದ ವಿರುದ್ಧ ಮಾತನಾಡಿದ್ದಾರೆ. ಹೀಗಾಗಿ, ಮುಂದೆ ಭಾರತ–ನೇಪಾಳ ಸಂಬಂಧ ಹೇಗಿರಲಿದೆ ಎಂಬ ಕುತೂಹಲವೂ ಇದೆ.




ನೇಪಾಳದ ಸಂಸತ್ತಿಗೆ ನಡೆಯುವ ಚುನಾವಣೆ ಕೊಂಚ ಭಿನ್ನ. ಸಂಸತ್ತಿನ ಕೆಳಮನೆಯಾಗಿರುವ ಜನಪ್ರತಿನಿಧಿ ಸಭೆಗೆ ಈ ಚುನಾವಣೆ ನಡೆಯುತ್ತದೆ. ಇದರ ಒಟ್ಟು ಸ್ಥಾನ ಬಲ 275. ಈ ಪೈಕಿ 165 ಸ್ಥಾನಗಳಿಗೆ ಜನರೇ ನೇರವಾಗಿ ಸಂಸದರನ್ನು ಆಯ್ಕೆ ಮಾಡುತ್ತಾರೆ. ಉಳಿದ 110 ಸ್ಥಾನಗಳಿಗೆ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಪಡೆದ ಮತಗಳ ಪ್ರಮಾಣದ ಅನುಸಾರ ಸ್ಥಾನಗಳನ್ನು ಹಂಚಲಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಎರಡು ಮತಪತ್ರಗಳನ್ನು ನೀಡಲಾಗುತ್ತದೆ. ಒಂದು ಮತಪತ್ರವು ಜನಪ್ರತಿನಿಧಿಯ ಆಯ್ಕೆಗೆ ಮೀಸಲಾಗಿದ್ದರೆ, ಇನ್ನೊಂದರಲ್ಲಿ ಯಾವ ಪಕ್ಷಕ್ಕೆ ಮತ ಎಂಬುದನ್ನು ನಮೂದಿಸಬೇಕಾಗುತ್ತದೆ. ಒಟ್ಟಾರೆ 138 ಸ್ಥಾನಗಳನ್ನು ಗೆದ್ದ ಪಕ್ಷ ಅಧಿಕಾರಕ್ಕೆ ಬರುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಈ ಎರಡರಲ್ಲೂ ಎಸ್‌ಆರ್‌ಪಿ ಮುನ್ನಡೆ ಕಾಯ್ದುಕೊಂಡಿದೆ.

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು


Presented by ಪ್ರಜಾವಾಣಿ

## ❖ ತೈಲ: ಹೆಚ್ಚುವರಿ ಖರೀದಿಗೆ ಮಾತುಕತೆ

**ಸಂದರ್ಭ: ಅಮೆರಿಕ, ರಷ್ಯಾ ಮತ್ತು ಪಶ್ಚಿಮ ಆಫ್ರಿಕಾದಿಂದ ಹೆಚ್ಚುವರಿಯಾಗಿ ಕಚ್ಚಾ ತೈಲ ಖರೀದಿ ಮಾಡಲು ಭಾರತದ ಕಂಪನಿಗಳು ಮಾತುಕತೆಗೆ ಮುಂದಾಗಿವೆ.**

- ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ದೀರ್ಘ ಅವಧಿಗೆ ಮುಂದುವರಿದರೆ, ಅದರಿಂದ ಉಂಟಾಗುವ ತೈಲ ಕೊರತೆಯನ್ನು ಸರಿದೂಗಿಸಿಕೊಳ್ಳಲು ಈ ಹೆಜ್ಜೆ ಇರಿಸಲಾಗಿದೆ.

- ತೈಲ ಸಂಸ್ಕರಣಾ ಘಟಕಗಳು ತಮ್ಮಲ್ಲಿನ ನಿರ್ವಹಣಾ ಕೆಲಸಗಳನ್ನು ಮುಂದಕ್ಕೆ ಹಾಕಿವೆ, ಮಿಗತ ತೈಲ ಸಂಗ್ರಹವನ್ನು ಹೊಂದಲು ಕೆಲಸ ಮಾಡುತ್ತಿವೆ ಎಂದು ಗೊತ್ತಾಗಿದೆ.
- ಭಾರತವು ಫೆಬ್ರುವರಿಯಲ್ಲಿ ಆಮದು ಮಾಡಿಕೊಂಡ ಕಚ್ಚಾ ತೈಲದಲ್ಲಿ ಸರಿಸುಮಾರು ಅರ್ಧದಷ್ಟು ಹೊರ್ಮುಜ್ ಜಲಸಂಧಿಯ ಮೂಲಕ ಬಂದಿದೆ. ಸಮರದ ಕಾರಣದಿಂದಾಗಿ ಈ ಜಲಸಂಧಿಯು ಬಹುತೇಕ ಬಂದ್ ಆಗಿದೆ.
- 'ಹೊರ್ಮುಜ್ ಜಲಸಂಧಿಯನ್ನು ಬಳಕೆ ಮಾಡದ ಹಡಗುಗಳು ಮೊದಲಿನಂತೆಯೇ ಕಚ್ಚಾ ತೈಲ ಸಾಗಣೆ ಮಾಡುತ್ತಿವೆ. ಸಂಘರ್ಷಕ್ಕೆ ತುತ್ತಾಗದೆ ಇರುವ ಕಡೆಗಳಿಂದ ತೈಲ ತರಿಸಿಕೊಳ್ಳುವ ಪ್ರಮಾಣವನ್ನು ನಾವು ಹೆಚ್ಚು ಮಾಡಿದ್ದೇವೆ' ಎಂದು ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- ರಷ್ಯಾದ ರೊಸ್ನೆಫ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ಅಮೆರಿಕವು ಕಳೆದ ವರ್ಷ ನಿರ್ಬಂಧ ವಿಧಿಸಿದ ನಂತರದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್, ಹಿಂದುಸ್ತಾನ್ ಪೆಟ್ರೋಲಿಯಂ ಎಚ್‌ಪಿಸಿಎಲ್-ಮಿತ್ತಲ್ ಎನರ್ಜಿ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವು ದನ್ನು ನಿಲ್ಲಿಸಿದವು ಅವು ಈಗ ಮತ್ತೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಆರಂಭಿಸಿವೆ ಎಂದು ಮೂಲಗಳು ಹೇಳಿವೆ.

# ರಾಜ್ಯದಲ್ಲಿ ಕೃಷಿ ಸಾಲ ₹2.10 ಲಕ್ಷ ಕೋಟಿ

ನವದೆಹಲಿ: ನಬಾರ್ಡ್‌ನ ಇತ್ತೀಚಿನ ವರದಿಯ ಪ್ರಕಾರ, ಕರ್ನಾಟಕದಲ್ಲಿ ಕೃಷಿಕರು ಮಾಡಿರುವ ಸಾಲ ₹2.10 ಲಕ್ಷ ಕೋಟಿ ಆಗಿದೆ.

ಲೋಕಸಭೆಯಲ್ಲಿ ಡಿಎಂಕೆ ಸದಸ್ಯ ಎ. ರಾಜಾ ಅವರು ಪ್ರಶ್ನೋತ್ತರ ಅವಧಿಯಲ್ಲಿ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, 'ತಮಿಳುನಾಡಿನಲ್ಲಿ ಅತಿ ಹೆಚ್ಚು ರೈತರು ಕೃಷಿ ಸಾಲ ಪಡೆದಿದ್ದಾರೆ. ಕೃಷಿ ಸಾಲದಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕದಲ್ಲಿ ರೈತರು ₹88,800 ಕೋಟಿ ಬೆಳೆ ಸಾಲ ಪಡೆದಿದ್ದರೆ, ₹ 1.21 ಲಕ್ಷ ಕೋಟಿ ಅವಧಿ ಸಾಲ ಪಡೆದಿದ್ದಾರೆ.

# 'ಪಂಪ್ಡ್ ಸ್ಟೋರೇಜ್: ಅರಣ್ಯಕ್ಕೆ ಧಕ್ಕೆ ಇಲ್ಲ'



ಬೆಂಗಳೂರು: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಅರಣ್ಯಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ. ನೆಲದಡಿ ಪೈಪ್‌ಗಳನ್ನು ಅಳವಡಿಸಿದ ನಂತರ ಈಗಿರುವಂತೆಯೇ ಮಣ್ಣುಮುಚ್ಚಿ ಸಮತಟ್ಟು ಮಾಡಲಾಗುತ್ತದೆ ಎಂದು ಜಾರ್ಜ್ ಹೇಳಿದರು.

ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಯೋಜನೆಗೆ ಜನಪ್ರತಿನಿಧಿಗಳು ದನಿಗೂಡಿಸಬೇಕು. ಯೋಜನೆ ಅನುಷ್ಠಾನವಾದರೆ ಎರಡು ಸಾವಿರ ಮೆಗಾವಾಟ್ ವಿದ್ಯುತ್ ಶೇಖರಿಸಿಡಬಹುದು ಎಂದರು. 'ಹಿಂದೆ ನಾನು ಬೆಂಗಳೂರು ಅಭಿವೃದ್ಧಿ ಸಚಿವನಾಗಿದ್ದಾಗ, ಸಂಚಾರದಟ್ಟಣೆ ತಗ್ಗಿಸಲು ಉಕ್ಕಿನ ಸೇತುವೆ ನಿರ್ಮಾಣಕ್ಕೆ ಮುಂದಾಗಿದ್ದೆ. ಆಗಲೂ ವಿರೋಧ ವ್ಯಕ್ತವಾಯಿತು. ಈಗ ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ವಿನಾಕಾರಣ ವಿರೋಧ ಮಾಡಲಾಗುತ್ತಿದೆ. ಯೋಜನೆಯಿಂದ ಅಲ್ಲಿನ ಪ್ರಾಣಿಗಳಿಗೂ ತೊಂದರೆ ಆಗುವುದಿಲ್ಲ' ಎಂದು ಹೇಳಿದರು.

# 'ತೇಲುವ ಸೌರ ವಿದ್ಯುತ್ ಘಟಕ: ಬಿಎಚ್‌ಇಎಲ್ ವರದಿ'

ಬೆಂಗಳೂರು: ಕೆರೆಗಳ ಮೇಲೆ 'ತೇಲುವ ಸೌರ ವಿದ್ಯುತ್ ಘಟಕ' ಅಳವಡಿಸುವ ಕುರಿತು ಬಿಎಚ್‌ಇಎಲ್ ಸಲ್ಲಿಸಿರುವ ಕಾರ್ಯಸಾಧ್ಯತಾ ವರದಿಯನ್ನು ಪರಿಶೀಲಿಸಿ ಅಂತಿಮ ತೀರ್ಮಾನ ಹಾಗೂ ಶಿಫಾರಸು ಮಾಡುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಕುರಿತಂತೆ ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ, ಬೆಸ್ಕಾಂ ಮತ್ತು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಇತರೆ ಅಧಿಕಾರಿಗಳ ಜೊತೆ ಸಚಿವರು ಸೋಮವಾರ ಚರ್ಚೆ ನಡೆಸಿದರು.

'ಏತ ನೀರಾವರಿ ಯೋಜನೆಗಳಿಗೆ ತಗಲುತ್ತಿರುವ ವಿದ್ಯುತ್ ವೆಚ್ಚದ ಹೊರೆ ಇಳಿಸಲು ಹಾಗೂ ಹಸಿರು ಇಂಧನ ಬಳಕೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದರ ಭಾಗವಾಗಿ ಕೆರೆಗಳ ಮೇಲೆ 'ತೇಲುವ ಸೌರ ವಿದ್ಯುತ್ ಘಟಕ'ಗಳನ್ನು ಸ್ಥಾಪಿಸುವ ಕುರಿತು ಕಾರ್ಯಸಾಧ್ಯತಾ ವರದಿ ನೀಡುವಂತೆ ಬಿಎಚ್‌ಇಎಲ್‌ಗೆ ಸೂಚನೆ ನೀಡಲಾಗಿತ್ತು' ಎಂದರು.

'ಬಿಎಚ್‌ಇಎಲ್ ಅಧಿಕಾರಿಗಳು ಆರು ತಿಂಗಳು ಅಧ್ಯಯನ ನಡೆಸಿ, ಕೋಲಾರ ಜಿಲ್ಲೆಯ ಸೋಮಾಂಬುಧಿ ಅಗ್ರಹಾರ ಕೆರೆಯಲ್ಲಿ ಪ್ರಾಯೋಗಿಕವಾಗಿ ತೇಲುವ ಸೌರ ವಿದ್ಯುತ್ ಘಟಕ ಸ್ಥಾಪಿಸಿ 100 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಇರುವ ಸಾಧ್ಯತೆಗಳ ಕುರಿತು ವರದಿ ಸಲ್ಲಿಸಿದ್ದಾರೆ' ಎಂದರು.

ಯೋಜನೆ ಅನುಷ್ಠಾನದ ವಿವಿಧ ಮಾದರಿಗಳ ಬಗ್ಗೆ ಚರ್ಚೆ ನಡೆಸಿದ ಸಚಿವರು, ಬಿಎಚ್‌ಇಎಲ್ ನೀಡಿರುವ ವರದಿಯನ್ನು ತಾಂತ್ರಿಕವಾಗಿ ಮರು ಪರಿಶೀಲಿಸುವಂತೆ ಸೂಚಿಸಿದರು.



ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಬಿ.ಕೆ. ಪವಿತ್ರ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ ಇದ್ದರು.

Dr Rajkumar IAS/KAS Academy

### ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಬಳಕೆ– ಕಾಯ್ದೆ ತಿದ್ದುಪಡಿಗೆ ಮಸೂದೆ

# ಇವಿಎಂ ಬದಲು ಇನ್ನು ಮತಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಬದಲು ಮತಪತ್ರಗಳ (ಬ್ಯಾಲೆಟ್) ಬಳಕೆಗೆ ಅವಕಾಶ ಕಲ್ಪಿಸುವ ‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ’ ಸೇರಿ ಒಟ್ಟು ನಾಲ್ಕು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಮತ ಯಂತ್ರದ ಪಾರದರ್ಶಕತೆ, ವಿಶ್ವಾಸಾರ್ಹತೆ ಕುರಿತು ಅನುಮಾನ ವ್ಯಕ್ತಪಡಿಸುತ್ತಿರುವ ಆಡಳಿತಾರೂಢ ಕಾಂಗ್ರೆಸ್, ಮತಪತ್ರ ಬಳಕೆಗೆ ಆಸಕ್ತಿ ಹೊಂದಿದೆ. ಈ ಕಾರಣಕ್ಕೆ ಕಾಯ್ದೆ ತಿದ್ದುಪಡಿಗೆ ಮುಂದಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಈ ಮಸೂದೆಯನ್ನು ಮಂಡಿಸಿದರು.

ಸಂವಿಧಾನದ 326ನೇ ವಿಧಿ ಅಡಿಯಲ್ಲಿ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಮುಖ್ಯವಾಗಿ, ಮತದಾರರ ಮತಪತ್ರದ ಗೋಪ್ಯತೆ ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸಂರಕ್ಷಿಸುವುದು ಈ ಮಸೂದೆಯ ಉದ್ದೇಶ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆ ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದೂ ತಿದ್ದುಪಡಿ ಮಸೂದೆಯಲ್ಲಿ ವಿವರಿಸಲಾಗಿದೆ.

ಜಿಲ್ಲಾ ಪಂಚಾಯತಿಯ ಪ್ರತಿಯೊಂದು ಮತ ಕ್ಷೇತ್ರದಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಮೊದಲು ಆಯುಕ್ತರು ಮತದಾನದ ಪಟ್ಟಿ ಸಿದ್ಧಪಡಿಸಬೇಕಿತ್ತು. ಆ ಹೊಣೆಯನ್ನು ಉಪವಿಭಾಗಾಧಿಕಾರಿಗೆ ನೀಡಲಾಗಿದೆ. ಈ ಸಂಬಂಧ ಮೂಲ ಕಾಯ್ದೆಯ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ.

ಮೂಲ ಕಾಯ್ದೆಯಲ್ಲಿದ್ದ ಜಿಲ್ಲಾ ಪಂಚಾಯತಿಯ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ. ಅಂದರೆ, ಭಾರತೀಯ ಚುನಾವಣಾ ಅಯೋಗ ಸಿದ್ಧಪಡಿಸುವ ವಿಧಾನಸಭೆಯ ಮತದಾರರ ಪಟ್ಟಿಯನ್ನು ಅಳವಡಿಸಿಕೊಳ್ಳಲು ಇರುವ ಅಂಶವನ್ನು ತಿದ್ದುಪಡಿ ಮಸೂದೆಯಲ್ಲಿ ಕೈಬಿಡಲಾಗಿದೆ.

ಇತರ ಮಸೂದೆಗಳು: ರಾಜ್ಯದಲ್ಲಿ ಲಭ್ಯವಿರುವ ಎಲ್ಲ ಬಗೆಯ ಪ್ರಾಚೀನ ಹಸ್ತಪ್ರತಿಗಳ ಮಾಹಿತಿಯನ್ನು ಸಂಗ್ರಹಿಸಿ, ಡಿಜಿಟಲೀಕರಣದ ಮೂಲಕ ಸಂರಕ್ಷಿಸುವ ಉದ್ದೇಶದಿಂದ ‘ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿ ಮಸೂದೆ, ಲೋಕಾಯುಕ್ತರ ವೇತನ ಮತ್ತು ಭತ್ಯೆ ಪರಿಷ್ಕರಣೆಗೆ ‘ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ಮಸೂದೆ’ ಮತ್ತು ದುರ್ನಡತೆ, ನಿರ್ಲಕ್ಷ್ಯ, ಕರ್ತವ್ಯಲೋಪ ಸಂದರ್ಭದಲ್ಲಿ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳುವ ಸಂಬಂಧ ‘ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ’ಯನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

### ಷರೀಯತ್‌ನಲ್ಲಿ ಮಹಿಳೆಯರ ಹಕ್ಕುಗಳು ಪುರುಷರ ಅರ್ಧದಷ್ಟು: ಪ್ರಶಾಂತ್ ಭೂಷಣ್

# ‘ಯುಸಿಸಿಯಿಂದ ಸಮಾನ ಹಕ್ಕು’

ಪ್ರಜಾವಾಣಿ ವಾರ್ತೆ

**ಶಾಸಕಾಂಗದ ವಿವೇಚನೆಗೆ ಯುಸಿಸಿ**

ಷರೀಯತ್ ಅನೂರ್ಜಿತ ಎಂದು ಘೋಷಿಸುವ ಮತ್ತು ಕಾನೂನಿನ ನಿರ್ವಾತವನ್ನು ಸೃಷ್ಟಿಸುವ ಬದಲು, ಅದನ್ನು ಶಾಸಕಾಂಗದ ವಿವೇಚನೆಗೆ ಉಲ್ಲೇಖಿಸುವುದು ಉತ್ತಮ. ಇದರಿಂದ ಶಾಸಕಾಂಗವು ಏಕರೂಪ ನಾಗರಿಕ ಸಂಹಿತೆಯ ಮೇಲೆ ಕಾನೂನು ಜಾರಿಗೊಳಿಸಲಿದೆ. ಈ ಹಿಂದೆಯೂ ನ್ಯಾಯಾಲಯವು ಏಕರೂಪ ನಾಗರಿಕ ಸಂಹಿತೆಯನ್ನು ಶಿಫಾರಸು ಮಾಡಿತ್ತು

**ಸುಪ್ರೀಂ ಕೋರ್ಟ್ ನ್ಯಾಯಪೀಠ**

ನವದೆಹಲಿ: ದೇಶದ ಎಲ್ಲ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತರಿಪಡಿಸುವ ಏಕೈಕ ಮಾರ್ಗವೆಂದರೆ, ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸುವುದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಮುಸ್ಲಿಂ ವೈಯಕ್ತಿಕ ಕಾನೂನು (ಷರೀಯತ್) ಅಡಿಯಲ್ಲಿ ಉತ್ತರಾಧಿಕಾರದ ನಿಬಂಧನೆಗಳನ್ನು ಪ್ರಶ್ನಿಸುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಮುಸ್ಲಿಂ ಸಮುದಾಯದ ಒಂದು ದೊಡ್ಡ ಭಾಗವು ಪಿತ್ರಾರ್ಜಿತ ಹಕ್ಕುಗಳಿಂದ ವಂಚಿತವಾಗಿದೆ ಎಂಬುದು ನಿಜ. ಆದರೆ, ಷರೀಯತ್‌ನ ಉತ್ತರಾಧಿಕಾರದ ನಿಬಂಧನೆಯನ್ನು ರದ್ದುಗೊಳಿಸಿದರೆ, ಯಾವ ಕಾನೂನು ಉತ್ತರಾಧಿಕಾರವನ್ನು ನಿಯಂತ್ರಿಸಬೇಕು? ಈ ಪ್ರಶ್ನೆಗೆ ನಿಖರವಾದ ಉತ್ತರ... ಯುಸಿಸಿ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಆರ್. ಮಹಾದೇವನ್ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ನ್ಯಾಯಪೀಠ ಹೇಳಿದೆ.

ಮುಸ್ಲಿಂ ಮಹಿಳೆಯರಿಗೆ ಸಮಾನ ಉತ್ತರಾಧಿಕಾರದ ಹಕ್ಕು ನೀಡುವಂತೆ ಕೋರಿ ಪೌಲೋಮಿ ಪವಿನಿ ಶುಕ್ಲಾ ಮತ್ತು ಇತರರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯವು ಪರಿಗಣಿಸಿತು.



ಬುಡಕಟ್ಟು ಜನಾಂಗಗಳು ಸೇರಿ ವಿವಿಧ ಸಮುದಾಯ ಗಳಲ್ಲಿ ಅನೇಕ ಅಸಮಾನತೆಗಳಿವೆ ಎಂಬುದನ್ನು ಗಮನಿಸಿದ ಪೀಠವು, ಇವುಗಳನ್ನು ನ್ಯಾಯಾಲಯವು ತಳ್ಳಿಹಾಕ ಬಹುದೇ ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ಒಬ್ಬ ಪುರುಷ– ಒಬ್ಬ ಮಹಿಳೆ, ಅಂದರೆ ಏಕಪತ್ನಿತ್ವದ ವಿವಾಹವು ಸಮಾನತೆಯ ಗುರಿ ಸಾಧಿಸಿದೆಯೇ ಎಂದು ಕೇಳಿತು.

‘ದೇಶದ ಎಲ್ಲ ಬಹುಪತ್ನಿತ್ವ ವಿವಾಹಗಳನ್ನು ಈ ನ್ಯಾಯಾಲಯವು ರದ್ದುಗೊಳಿಸಬಹುದೇ’ ಎಂದೂ ನ್ಯಾಯಪೀಠ ಪ್ರಶ್ನಿಸಿತು.

‘ಷರೀಯತ್, ಮಹಿಳೆಯರಿಗೆ ಪುರುಷರ ಅರ್ಧದಷ್ಟು ಹಕ್ಕನ್ನಷ್ಟೇ ಕೊಟ್ಟಿದೆ’ ಎಂದು ಅರ್ಜಿದಾರರ ಪರ ಹಾಜರಾದ ವಕೀಲ ಪ್ರಶಾಂತ್ ಭೂಷಣ್ ಪೀಠಕ್ಕೆ ತಿಳಿಸಿದರು.

‘ತ್ರಿವಳಿ ತಲಾಖ್ ಕೂಡ ಷರೀಯತ್‌ನ ಭಾಗವಾಗಿದೆ. ಆದರೆ, ಶಾಯರಾ ಬಾನೊ (ತ್ರಿವಳಿ ತಲಾಖ್) ಪ್ರಕರಣದಲ್ಲಿ ಈ ನ್ಯಾಯಾಲಯವು, ‘ಇದೊಂದು (ತ್ರಿವಳಿ ತಲಾಖ್) ಸ್ವೇಚ್ಛಾಚಾರ. ಅಲ್ಲದೆ, ಸಾರ್ವಜನಿಕ ನೀತಿಯ ವಿರುದ್ಧವಾಗಿದ್ದು, ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುತ್ತದೆ’ ಎಂಬ ಅಭಿಪ್ರಾಯದೊಂದಿಗೆ ಅದನ್ನು ರದ್ದುಗೊಳಿಸಿದೆ’ ಎಂದು ನ್ಯಾಯಾಲಯಕ್ಕೆ ವಿವರಿಸಿದರು. ▶5

- 'ಯಾವುದೇ ಶಾಸನಬದ್ಧ ಕಾನೂನು ಪಾಲಿಸದೆ, ಮುಸ್ಲಿಂ ಪುರುಷರು ಏಕ ಪಕ್ಷೀಯವಾಗಿ ವಿಚ್ಛೇದನ ಪಡೆಯುತ್ತಾರೆ. ಆದ್ದರಿಂದ ನಾವು ಷರೀಯತ್‌ನಡಿ ಹೊಂದಿದ ಬಹುಪತ್ನಿತ್ವವನ್ನು ಅಮಾನ್ಯ ವೆಂದು ಘೋಷಿಸಬಹುದೇ?
- ಇಲ್ಲ, ಆದ್ದರಿಂದ ಶಾಸಕಾಂಗವು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ಜಾರಿಗೊಳಿಸಬೇಕು' ಎಂದು ಪೀಠ ಹೇಳಿತು.

- ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗ ಹಸ್ತಕ್ಷೇಪ ಮಾಡುವುದು ಸೂಕ್ತ ಎಂದೂ ನ್ಯಾಯಾಲಯಹೇಳಿತು.
- 'ಇದು ಸಮಾನತೆಯ ಪ್ರಶ್ನೆಯಾಗಿದೆ' ಎಂದು ನ್ಯಾಯಪೀಠದ ಗಮನಕ್ಕೆ ತಂದ ಪ್ರಶಾಂತ್ ಭೂಷಣ್, ಅರ್ಜಿದಾರರಲ್ಲಿ ಕೆಲವರು ಮುಸ್ಲಿಂ ಮಹಿಳೆಯರು ಎಂದು ಹೇಳಿದರು.
- ಷರೀಯತ್ ಉತ್ತರಾಧಿಕಾರದ ನಿಬಂಧನೆಗಳನ್ನು ರದ್ದುಗೊಳಿಸಿದಲ್ಲಿ ಪರಿಹಾರೋಪಾಯಗಳನ್ನು ಸೇರಿಸಲು ಅರ್ಜಿಯ ತಿದ್ದುಪಡಿ ಮಾಡುವಂತೆ ಪೀಠ ಸೂಚಿಸಿತು.

# ಪಾಲಿಕೆಗಳಿಗೆ ₹57 ಸಾವಿರ ಕೋಟಿ ಕೊರತೆ

## ಸೇವಾಮಟ್ಟದ ಕೊರತೆ ನಿವಾರಿಸಲು ಮುಂದಿನ ಐದು ವರ್ಷಗಳಿಗೆ ನಿಧಿ ಅಗತ್ಯ: 5ನೇ ರಾಜ್ಯ ಹಣಕಾಸು ಆಯೋಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸೇವಾಮಟ್ಟದ ಕೊರತೆಯನ್ನು ನಿವಾರಿಸಿ, ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಬೇಕಿರುವ ಐದು ನಗರ ಪಾಲಿಕೆಗಳಿಗೆ, ಮುಂದಿನ ನಾಲ್ಕರಿಂದ ಐದು ವರ್ಷಗಳವರೆಗೆ ₹57 ಸಾವಿರ ಕೋಟಿ ಕೊರತೆಯಾಗಲಿದೆ.

ನಗರ ಪಾಲಿಕೆಗಳಲ್ಲಿ ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್ ಸೇರಿದಂತೆ ಬೃಹತ್ ಯೋಜನೆಗಳಿಗೆ ₹55,586 ಕೋಟಿ ಅಗತ್ಯವಿದೆ. 16ನೇ ಹಣಕಾಸು ಆಯೋಗವು ನಿರ್ದಿಷ್ಟ ಅನುದಾನವನ್ನು ಹಂಚಿಕೆ ಮಾಡದ್ದರಿಂದ, ನಗರ ಪಾಲಿಕೆಗಳು ತಮ್ಮದೇ ಸಂಪನ್ಮೂಲ ಗಳನ್ನು ಕಂಡುಕೊಳ್ಳಬೇಕಿದೆ. 2026–27ರಿಂದ 2030–31ರವರೆಗೆ ರಾಜಸ್ವ ಮತ್ತು ವೆಚ್ಚದ ಅಂದಾಜುಗಳು ₹57 ಸಾವಿರ ಕೋಟಿ ಕೊರತೆ ಸೂಚಿಸುತ್ತವೆ ಎಂದು 5ನೇ ರಾಜ್ಯ ಹಣಕಾಸು ಆಯೋಗದ ಜಿಬಿಎ ಪ್ರದೇಶದ 5 ನಗರ ಪಾಲಿಕೆಗಳ ಕುರಿತ ವರದಿಯಲ್ಲಿ ತಿಳಿಸಿದೆ. ಈ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ನಗರ ಪಾಲಿಕೆಗಳಿಗೆ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ನಿರ್ದಿಷ್ಟ ಕಾಮಗಾರಿಗಳನ್ನು ಕೈಗೊಳ್ಳಲು ವೇತನ ಪಾವತಿ ಹೊರತುಪಡಿಸಿ ಕನಿಷ್ಠ ಶೇ 40ರಷ್ಟು ಅನುದಾನ ನೀಡಬೇಕು. ಇದರಿಂದ ನಗರ ಪಾಲಿಕೆಗಳು ಸ್ಥಳೀಯ ಅಗತ್ಯಗಳಿಗೆ ಹಣ ಬಳಸುವ ಸ್ವಾತಂತ್ರ್ಯ ಹೊಂದುತ್ತವೆ. 16ನೇ ಹಣಕಾಸು ಆಯೋಗವೂ ಮೂಲ ಅನುದಾನದಲ್ಲಿ ಶೇ 40ರಷ್ಟನ್ನು ಅನಿರ್ಬಂಧಿತ ಅನುದಾನವಾಗಿ ನೀಡಲು ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ.

ಹೊಸದಾಗಿ ರಚಿಸಲಾಗಿರುವ ವಾರ್ಡ್‌ಗಳಿಗೆ ಕಚೇರಿ ಸ್ಥಾಪನೆ ಮತ್ತು ಇತರೆ ಅಗತ್ಯ ಅವಶ್ಯಗಳಿಗೆ ಒಂದು ಬಾರಿಯ ಸ್ಥಾಪನಾ ವೆಚ್ಚದ ಅನುದಾನವನ್ನು ಸರ್ಕಾರ ನೀಡಬೇಕು. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ, ಐದು ನಗರ ಪಾಲಿಕೆಗಳಿಗೆ ಅನುದಾನ ನೀಡಲು ಶಿಫಾರಸು ಮಾಡಲಾಗಿದೆ.

**ಸಿಎಸ್‌ಆರ್ ನಿಧಿ:** ಬೆಂಗಳೂರು ನಗರ 2021–22ರಲ್ಲಿ ಅತಿಹೆಚ್ಚು ₹1,074.13 ಕೋಟಿಯನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿಯನ್ನಾಗಿ (ಸಿಎಸ್‌ಆರ್) ಪಡೆದುಕೊಂಡಿದೆ. ಅಗತ್ಯವಿರುವ ಯೋಜನೆಗಳಿಗೆ ಸಿಎಸ್‌ಆರ್ ಹರಿವನ್ನು ಕಾರ್ಯಗತಗೊಳಿಸಲು, ಪ್ರತಿಯೊಂದು ನಗರ ಪಾಲಿಕೆಯಲ್ಲೂ ಸಿಎಸ್‌ಆರ್ ಕೋಶ ಅಭಿವೃದ್ಧಿಪಡಿಸಿ, ಆ ಮೂಲಕ ನಿಧಿಯನ್ನು ಬಳಸಿಕೊಳ್ಳಬೇಕು. ಅಲ್ಲದೆ, ಹವಾಮಾನ ಯೋಜನೆಗಳಿಗೆ ವಿಶ್ವಸಂಸ್ಥೆ ಹಾಗೂ ರಾಷ್ಟ್ರೀಯ– ಅಂತರರಾಷ್ಟ್ರೀಯ ನಿಧಿ ಬಳಸಿಕೊಳ್ಳಲು ಹವಾಮಾನ ಕ್ರಿಯಾಕೋಶದಲ್ಲಿ ಮೇಲ್ವಿಚಾರಣೆ–ಅನುಷ್ಠಾನ ಘಟಕ ಸ್ಥಾಪಿಸಬೇಕು ಎಂದು ಶಿಫಾರಸು ಮಾಡಿದೆ.

Publication Date 11/03/2026

### ಅನುದಾನದ ಮೇಲೆ ಹೆಚ್ಚು ಅವಲಂಬಿತ

ಐದು ನಗರ ಪಾಲಿಕೆಗಳು ವಿಭಿನ್ನ ಅಭಿವೃದ್ಧಿ ನೆಲೆ ಮತ್ತು ಸಾಮರ್ಥ್ಯ ಹೊಂದಿದ್ದು, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಕಲ್ಯಾಣದ ಬಗ್ಗೆ ಹೆಚ್ಚು ಕಳಕಳಿ ಹೊಂದಿವೆ. ಉತ್ತರ, ಕೇಂದ್ರ ಮತ್ತು ಪಶ್ಚಿಮ ನಗರ ಪಾಲಿಕೆಗಳು ಅನೌಪಚಾರಿಕ ವಸತಿ ಪ್ರದೇಶಗಳು, ಜನನಿಬಿಡ ಪ್ರದೇಶಗಳಿಗೆ ಮೂಲ ಸೇವೆಗಳನ್ನು ಒದಗಿಸಬೇಕಿದೆ. ಪಶ್ಚಿಮ ನಗರ ಪಾಲಿಕೆಯು ಕಡಿಮೆ ಸಂಪನ್ಮೂಲ ಸಾಮರ್ಥ್ಯ ಹೊಂದಿದ್ದು, ಸಂಪನ್ಮೂಲ ಕೊರತೆ ಎದುರಿಸುತ್ತಿದೆ. ದಕ್ಷಿಣ ನಗರ ಪಾಲಿಕೆಯು 'ಒತ್ತಡದ ನಗರ' ನಿರ್ವಹಣೆಯೊಂದಿಗೆ ವಿಸ್ತಾರವಾಗುತ್ತಿದೆ. ಪೂರ್ವ ನಗರ ಪಾಲಿಕೆ ಸಮೃದ್ಧಿ ಹೊಂದಿರುವ ಆರ್ಥಿಕತೆಯನ್ನು ಹೊಂದುತ್ತಿದ್ದರೂ, ಅದರ ಸುಸ್ಥಿರತೆಗೆ ಪರಿಣಾಮಕಾರಿ ಸಂಪನ್ಮೂಲದ ನಿರ್ವಹಣೆಯ ಅಗತ್ಯವಿದೆ. ಆದ್ದರಿಂದ, ನಗರ ಪಾಲಿಕೆಗಳು ಬಾಹ್ಯ ಹಣಕಾಸಿನ ಮೂಲಗಳ ಮೇಲೆ, ಮುಖ್ಯವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದ ಮೇಲೆ ಹೆಚ್ಚು ಅವಲಂಬಿತವಾಗಿವೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಐದು ನಗರ ಪಾಲಿಕೆಗಳ ನಡುವೆ ಜನಸಂಖ್ಯೆ, ಆರ್ಥಿಕ ಅಸಮತೋಲನ-ವಿದೆ. ಪಶ್ಚಿಮ ನಗರ ಪಾಲಿಕೆ ವಿಸ್ತೀರ್ಣದಲ್ಲಿ ದೊಡ್ಡದಾಗಿದ್ದರೆ, ಆರ್ಥಿಕವಾಗಿ ದುರ್ಬಲವಾಗಿದೆ. ಹೀಗಾಗಿ, ಈ ಪಾಲಿಕೆಗೆ ಮೂಲಸೌಕರ್ಯ ಅಭಿವೃದ್ಧಿ ಅನುದಾನವನ್ನು ರಾಜ್ಯ ಸರ್ಕಾರ ಒದಗಿಸಬೇಕು. ಉತ್ತರ ನಗರ ಪಾಲಿಕೆ ಆರ್ಥಿಕವಾಗಿ ದುರ್ಬಲವಾಗಿದ್ದು, ಸರ್ಕಾರದ ಹಣಕಾಸಿನ ನೆರವು ಅಗತ್ಯವಾಗಿದೆ ಎಂದು ಹೇಳಿದೆ.

### ಎಷ್ಟು ಅನುದಾನಕ್ಕೆ ಶಿಫಾರಸು?

| | |
|---|---|
| ಶೇ 10ರಷ್ಟು | ಎಲ್ಲ ನಗರ ಪಾಲಿಕೆಗಳಿಗೆ ಬಂಡವಾಳ ವೆಚ್ಚದ ನಿರ್ವಹಣಾ ಅನುದಾನ |
| ₹50 ಕೋಟಿ | ಪ್ರತಿ ನಗರ ಪಾಲಿಕೆಗೆ ಕಾರ್ಯಕ್ಷಮತೆ ಅನುದಾನ |
| ₹5 ಕೋಟಿ | ಪ್ರತಿ ವಾರ್ಡ್‌ಗೆ ಕಾರ್ಯಕ್ಷಮತೆ ಅನುದಾನ |
| ₹2 ಕೋಟಿ | ಪ್ರತಿ ಹೊಸ ವಾರ್ಡ್‌ಗೆ ಒಂದು ಬಾರಿಯ ಸ್ಥಾಪನಾ ಅನುದಾನ |
| ₹1 ಕೋಟಿ | ಸೌಲಭ್ಯವಿಲ್ಲದೆ ಅಸ್ತಿತ್ವದಲ್ಲಿರುವ ಪ್ರತಿ ವಾರ್ಡ್‌ಗೆ ಸ್ಥಾಪನಾ ಅನುದಾನ |
| ₹5 ಕೋಟಿ | ಪ್ರತಿ ನಗರ ಪಾಲಿಕೆಗೆ ಸಾಮರ್ಥ್ಯ ಅಭಿವೃದ್ಧಿ ಅನುದಾನ |

### ಮುದ್ರಾಂಕ ಶುಲ್ಕದ ಸರ್‌ಚಾರ್ಜ್ ಪಾಲಿಕೆಗಳಿಗೆ ಪಾವತಿಸಿ

ಮುದ್ರಾಂಕ ಶುಲ್ಕದ (ಸ್ಟ್ಯಾಂಪ್ ಡ್ಯೂಟಿ) ಸರ್‌ಚಾರ್ಜ್ ಅನ್ನು 2020ರ ಜನವರಿ 29ರಿಂದ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು ಬಿಡುಗಡೆ ಮಾಡಿಲ್ಲ. ಬಾಕಿ ಉಳಿದಿರುವ ಸರ್‌ಚಾರ್ಜ್ ಅನ್ನು ಐದು ನಗರ ಪಾಲಿಕೆಗಳಿಗೆ ಬಿಡುಗಡೆ ಮಾಡಬೇಕು. ಭವಿಷ್ಯದಲ್ಲಿ ನಿಯಮಿತವಾಗಿ ಸರ್‌ಚಾರ್ಜ್ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು 5ನೇ ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ.

2006–07ರಿಂದ 2018–19ರವರೆಗೆ ವಸೂಲಾದ ಮುದ್ರಾಂಕ ಶುಲ್ಕದ ಮೇಲಿನ ಸರ್‌ಚಾರ್ಜ್ ಮೊತ್ತಕ್ಕೆ ಹೆಚ್ಚುವರಿಯಾಗಿ ₹239.84 ಕೋಟಿಯನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿತ್ತು. ಅದಾದ ನಂತರ ಯಾವುದೇ ಮೊತ್ತ ಬಿಡುಗಡೆ ಆಗಿಲ್ಲ. ಹಿಂದಿನ ಬಿಬಿಎಂಪಿಗೆ ಬಿಡುಗಡೆಯಾಗದ ಸರ್‌ಚಾರ್ಜ್ ಮೊತ್ತವನ್ನು ಐದು ನಗರ ಪಾಲಿಕೆಗಳಿಗೆ ಬಿಡುಗಡೆ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ.

### ಜಿಎಸ್‌ಟಿ: ಶೇ 5ರಷ್ಟು ಪಾಲಿಕೆಗಳ ಪಾಲು

ರಾಜ್ಯದ ಜಿಎಸ್‌ಟಿ ಸಂಗ್ರಹದಲ್ಲಿ ಶೇ 60ರಷ್ಟು ಬೆಂಗಳೂರು ಪ್ರದೇಶದಿಂದಲೇ ಬರುತ್ತದೆ. ಇದಕ್ಕೆ ಕೊಡುಗೆ ನೀಡಿದ ಐದು ನಗರ ಪಾಲಿಕೆಗಳ ಸಂಪನ್ಮೂಲ ಕೊರತೆಯನ್ನು ನೀಗಿಸಲು ರಾಜ್ಯದಲ್ಲಿ ಸಂಗ್ರಹವಾಗುವ ಜಿಎಸ್‌ಟಿಯಲ್ಲಿ ಶೇ 5ರಷ್ಟನ್ನು ಅವುಗಳಿಗೆ ನೀಡಬೇಕು ಎಂದು ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ. ನಗರ ಪಾಲಿಕೆಗಳ ಸ್ವಂತ ಸಂಪನ್ಮೂಲ ರಾಜಸ್ವವನ್ನು ಹೆಚ್ಚಿಸಲು ನೂತನ ಕ್ರಮಗಳನ್ನು ಸೂಚಿಸಿರುವ ಆಯೋಗ, ಆಸ್ತಿ ತೆರಿಗೆ ಸುಧಾರಣೆ, ತೆರಿಗೆಯೇತರ ರಾಜಸ್ವದ ಮೂಲಗಳ ಬಳಕೆ, ಜಾಹೀರಾತು ಶುಲ್ಕ, ಮನರಂಜನಾ ಶುಲ್ಕ, ದಟ್ಟಣೆ ಶುಲ್ಕ ಸಂಗ್ರಹಿಸುವ ಜೊತೆಗೆ, ಮುನಿಸಿಪಲ್ ಬಾಂಡ್ ಮೂಲಕ ಹಣ ಸಂಗ್ರಹ, ಸಿಎಸ್‌ಆರ್ ನಿಧಿಗಳನ್ನು ಸಂಪನ್ಮೂಲ ನೆಲೆಯಾಗಿ ವಿಸ್ತರಿಸಿಕೊಳ್ಳಲು ಸಲಹೆ ನೀಡಿದೆ. ಅಲ್ಲದೆ, ಕೇಂದ್ರ ಬಜೆಟ್‌ನ ಪ್ಯಾರಾ 46ರಂತೆ, ಐದು ನಗರ ಪಾಲಿಕೆಗಳು ಹಸಿರು ಬಾಂಡ್‌ಗಳನ್ನೂ ವಿತರಿಸಬಹುದು.

### ಜಿಬಿಎಗೆ ಅನುದಾನ

**₹15** ಕೋಟಿಯನ್ನು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ನೀಡಬೇಕು

**₹22.95** ಕೋಟಿಯನ್ನು ಯೋಜನಾ ಬೆಂಬಲ, ಸಂಯೋಜಿತ ನಿಯಂತ್ರಣ ಕೇಂದ್ರ ನಿರ್ವಹಣೆಗೆ ಕೊಡಬೇಕು

**₹35.06** ಕೋಟಿಯನ್ನು 369 ವಾರ್ಡ್‌ಗಳಲ್ಲಿ ವಾರ್ಡ್‌ಮಟ್ಟದ ಮಾಹಿತಿ ತಂತ್ರಜ್ಞಾನ ಆಧರಿತ ಸೇವೆಗಳಿಗೆ ನೀಡಬೇಕು

### ಚುನಾವಣೆ ನಡೆಸದ್ದರಿಂದ ಅನುದಾನ ಇಲ್ಲ

ಬಿಬಿಎಂಪಿಗೆ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಯದ ಕಾರಣ 16ನೇ ಹಣಕಾಸು ಆಯೋಗದಿಂದ ಬಿಬಿಎಂಪಿಗೆ ₹2,029.57 ಕೋಟಿ ಅನುದಾನ ಬಂದಿಲ್ಲ ಎಂದು 5ನೇ ರಾಜ್ಯ ಹಣಕಾಸು ಆಯೋಗ ಹೇಳಿದೆ.

ಘನತ್ಯಾಜ್ಯ ನಿರ್ವಹಣೆಗೆ ₹1,245 ಕೋಟಿ, ಸುತ್ತುವರಿದ ಗಾಳಿಯ ಗುಣಮಟ್ಟಕ್ಕೆ ₹511.90 ಕೋಟಿ ಹಾಗೂ ಆರೋಗ್ಯ ವಲಯಕ್ಕೆ ₹94.29 ಕೋಟಿ, ನೈಸರ್ಗಿಕ ವಿಕೋಪ ನಿರ್ವಹಣೆಗೆ ₹272.67 ಕೋಟಿ ಅನುದಾನ ಬಿಡುಗಡೆ ಆಗಿಲ್ಲ.

Presented by ಪ್ರಜಾವಾಣಿ

## ❖ 2028ರ ವರೆಗೆ ಜಲ ಜೀವನ್ ಮಿಷನ್ ವಿಸ್ತರಣೆ

**ಸಂದರ್ಭ: ಜಲ ಜೀವನ್ ಮಿಷನ್ ಯೋಜನೆಯನ್ನು 2028ರ ಡಿಸೆಂಬರ್ ವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.**

- ಗ್ರಾಮೀಣ ಭಾರತದ ಎಲ್ಲ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲು ಈ ಯೋಜನೆಯನ್ನು 2019ರಲ್ಲಿ ಪ್ರಾರಂಭಿಸಲಾಗಿತ್ತು. ಯೋಜನೆಯನ್ನು ಮರು ವಿನ್ಯಾಸ ಗೊಳಿಸುವ ಜಲಶಕ್ತಿ ಸಚಿವಾಲಯದ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.
- 'ಯೋಜನೆಯ ಗಮನವು ಮೂಲಸೌಕರ್ಯ ನಿರ್ಮಾಣದಿಂದ ಶ್ರೀ ಸೇವೆಯ ವಿತರಣೆಯತ್ತ ಹರಿಯಲಿದೆ.
- ಮಿಷನ್‌ನ ಮರುರಚನೆಗಾಗಿ ಒಟ್ಟು ವೆಚ್ಚವನ್ನು ₹8.69 ಲಕ್ಷ ಕೋಟಿಗೆ ಹೆಚ್ಚಿಸಲು ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಕೇಂದ್ರದ ಒಟ್ಟು ಪಾಲು 23.59 ಲಕ್ಷ ಕೋಟಿ ಆಗಿರಲಿದೆ. ಈ ಮೂಲಕ ಕೇಂದ್ರದ ಪಾಲನ್ನು 21.51 ಲಕ್ಷ ಕೋಟಿ ಹೆಚ್ಚಿಸಲಾಗಿದೆ' ಎಂದರು.

- 'ಯೋಜನೆಯ ಗುರಿ ಸಾಧನೆಗಾಗಿ 'ಸುಜಲಂ ಭಾರತ್' ಎಂಬ ಏಕರೂಪದ ರಾಷ್ಟ್ರೀಯ ಡಿಜಿಟಲ್ ಚೌಕಟ್ಟನ್ನು ರೂಪಿಸಲಾಗುವುದು. ಇದರ ಅಡಿಯಲ್ಲಿ ಪ್ರತಿ ಹಳ್ಳಿಗೂ ವಿಶಿಷ್ಟವಾದ 'ಸುಜಲ್ ಗಾಂವ್' ಅಥವಾ 'ಸೇವಾ ಪ್ರದೇಶದ ಗುರುತು' ನೀಡಲಾಗುವುದು' ಎಂದರು.

## ❖ ರಾಜ್ಯದೆಲ್ಲೆಡೆ ಕಂಬಳಕ್ಕೆ ಅನುಮತಿ


**ಸಂದರ್ಭ: ದಕ್ಷಿಣ ಕನ್ನಡ ಹಾಗೂ ಕರ್ನಾಟಕದ ಇತರ ಭಾಗಗಳಲ್ಲಿ ಉಡುಪಿ ಜಿಲ್ಲೆಗಳಲ್ಲಿ ಹೊರತುಪಡಿಸಿ ಕಂಬಳ ನಡೆಸುವುದನ್ನು ಪ್ರಶ್ನಿಸಿ 'ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್' (ಪೆಟಾ) ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.**

- ಕರ್ನಾಟಕ ಹೈಕೋರ್ಟ್‌ನ ನವೆಂಬರ್ 14ರ ಆದೇಶ ಪ್ರಶ್ನಿಸಿ ಪೆಟಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ, 'ಕಂಬಳ ಕ್ರೀಡೆಯನ್ನು ರಾಜ್ಯದ 200 ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕು ಪ್ರಶ್ನಿಸಿದೆ.
- 'ಸಮಿತಿಯವರು ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಕೃತಿ ಪ್ರದರ್ಶಿಸಲು ಬಯಸಿದರೆ ತಪ್ಪೇನು? ರಾಜ್ಯದ ಇತರ ಭಾಗಗಳ ಜನರೂ ಈ ಸಂಸ್ಕೃತಿಯ ಪರಿಚಯ ಹೊಂದಲಿ' ಎಂದು ನ್ಯಾ. ಮೆಹ್ತಾ ಅಭಿಪ್ರಾಯಪಟ್ಟರು.
- ಆಗ ಪೆಟಾ ವಕೀಲರು, 'ನಿರ್ದಿಷ್ಟ ಪ್ರದೇಶದ ಹೊರತಾಗಿ ರಾಜ್ಯದ ಇತರ ಭಾಗಗಳಲ್ಲಿ ಕಂಬಳ ಆಯೋಜಿಸುವುದು ಒಪ್ಪುವಂತಹುದಲ್ಲ. ಸುಪ್ರೀಂ ಕೋರ್ಟ್ ಮುಂದೆ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರದ ಅನುಸಾರ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರವೇ ಕಂಬಳವನ್ನು ಆಯೋಜಿಸಬೇಕಿದೆ' ಎಂದರು.
- 'ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಂಬಳ ಸ್ಪರ್ಧೆ ನಡೆಸಲು ಬೆಂಗಳೂರು ರಂಬಳ ಸಮಿತಿಗೆ ಅನುಮತಿ ನೀಡಬಾರದು. ಈ ದಿಸೆಯಲ್ಲಿ ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕೋರಿ ಪೆಟಾ ಸಂಸ್ಥೆಯು ಹೈಕೋರ್ಟ್ ಮೆಟ್ಟಿಲೇರಿತ್ತು.
- 'ಬೇರಾವುದೇ ಜಿಲ್ಲೆಯಲ್ಲಿ ಕಂಬಳ ನಡೆಸುವುದರಿಂದ ಕೋಣಗಳಿಗೆ ಹಿಂಸೆ ನೀಡಿದಂತಾಗಲಿದೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಕಂಬಳಕ್ಕೆ ಲಕ್ಷಾಂತರ ಜನ ಬರುತ್ತಾರೆ. ಇದಕ್ಕಾಗಿ ವಿಐಪಿ ಪಾಸ್‌ಗಳನ್ನು ವಿತರಿಸಲಾಗುತ್ತಿದೆ. ದೊಡ್ಡ ದೊಡ್ಡ ಉದ್ಯಮಿಗಳು ಇದರ ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ. ಶಿವಮೊಗ್ಗದಲ್ಲೂ ಈ ಕ್ರೀಡೆ ನಡೆಸುವ ಚಿಂತನೆಯನ್ನು ಕಂಬಳ ಆಯೋಜನಾ ಸಮಿತಿ ಹೊಂದಿದೆ' ಎಂದು ಅರ್ಜಿಯಲ್ಲಿ ದೂರಲಾಗಿತ್ತು.
- 'ಸುಮಾರು 300 8. ಮಿಲ ದೂರದಿಂದ ತರಲಾಗುವ ದಣಿದ ಕೋಣಗಳನ್ನು ಸ್ಪರ್ಧೆಗೆ ಇಳಿಸಲಾಗು ತದೆ. ಇದು ಪ್ರಾಣಿ ಹಿಂಸೆಯಾಗುತ್ತದೆ. ಆದ್ದರಿಂದ, ನ್ಯಾಯಾಲಯ ನಿರ್ಧರಿಸುವ ವರೆಗೆ ಕೋಣಗಳನ್ನು ಬೆಂಗಳೂರಿಗೆ ಟ್ರಕ್‌ಲ್ಲಿ ತರದಂತೆ ಕಂಬಳ ಆಯೋಜನಾ ಸಮಿತಿಗೆ ಆದೇಶಿಸಬೇಕು' ಎಂದು ಕೋರಲಾಗಿತ್ತು.

## ❖ ಮಲಪ್ರಭೆ ತಟದಲ್ಲಿ ಚಿಫ್‌ಚಾಫ್ ಹಕ್ಕಿ

**ಸಂದರ್ಭ: ತಾಲ್ಲೂಕಿನ ಹೊಳೆಆಲೂರು ಭಾಗದ ಮಲಪ್ರಭೆ ತಟದಲ್ಲಿ ಫಿಲೋಸ್ಕೋಪಿಡೆ ಕುಟುಂಬಕ್ಕೆ ಸೇರಿದ ಕಾಮನ್ ಚಿಫ್‌ಚಾಫ್ ಹಕ್ಕಿ (ಕಂದು ಎಲೆ ಉಲಿಯಕ್ಕಿ) ಇದೇ ಮೊದಲ ಬಾರಿಗೆ ಕಂಡುಬಂದಿದೆ.**

- 'ಫಿಲೋಸ್ಕೋಪಸ್ ಕೊಲ್ಲಿಬಿಟಾ ಎಂಬ ಹೆಸರಿನಿಂದ ಗುರುತಿಸಲ್ಪಡುವ ಇದು ಚಿಕ್ಕಗಾತ್ರದ ಕೀಟಹಾರಿ ಪಕ್ಷಿ. ಮರಗಳ ಎಲೆಗಳ ನಡುವೆ ಅಡಗಿಕೊಂಡು ಕೀಟಗಳನ್ನು ಬೇಟೆಯಾಡುತ್ತದೆ. ಇವು ಹಾರಾಡುತ್ತಲೇ ಕೀಟಗಳನ್ನು ಹಿಡಿಯುವ ಸಾಮರ್ಥ್ಯ ಹೊಂದಿವೆ' ಎನ್ನುತ್ತಾರೆ ತಜ್ಞರು.



# ಯುದ್ಧ ಇಂಧನ ಸಂದಿಗ್ಧ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾದಾಗ (ಫೆಬ್ರುವರಿ 28) ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಬಗ್ಗೆ ಮತ್ತು ತೈಲ ಬೆಲೆ ಏರಿಕೆಯಾಗುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಆತಂಕ ಉಂಟಾಗಿತ್ತು. ಆ ಆತಂಕ ಈಗ ನಿಜವಾಗಿದೆ. ಭಾರತದ ಮೇಲೆ ಯುದ್ಧ ಹಲವು ರೀತಿಯ ಪರಿಣಾಮಗಳನ್ನು ಬೀರುತ್ತಿದ್ದು, ಅಡುಗೆ ಮನೆಯವರೆಗೂ ಅದರ ಬಿಸಿ ತಟ್ಟಿದೆ. ಹೋಟೆಲ್ ಉದ್ಯಮದಲ್ಲಿ ಗೊಂದಲದ ಸ್ಥಿತಿ ಏರ್ಪಟ್ಟಿದೆ. ಯುದ್ಧ ಇನ್ನಷ್ಟು ದಿನ ಮುಂದುವರಿದರೆ, ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ

ಪ್ರಜಾವಾಣಿ ವಾರ್ತೆ

ಭಾರತವು ತನ್ನ ತೈಲ ಅಗತ್ಯದ ಶೇ 85ರಷ್ಟಕ್ಕೆ ಆಮದನ್ನೇ ಅವಲಂಬಿಸಿದೆ. ಅಮೆರಿಕ, ಪಶ್ಚಿಮ ಆಫ್ರಿಕಾ, ರಷ್ಯಾ ಮತ್ತು ಲ್ಯಾಟಿನ್ ಅಮೆರಿಕ ಸೇರಿದಂತೆ ಜಗತ್ತಿನ 40 ವಿವಿಧ ದೇಶಗಳಿಂದ ಭಾರತವು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಅಮೆರಿಕ–ಇಸ್ರೇಲ್ ದೇಶಗಳು ಇರಾನ್ ಮೇಲೆ ಜಂಟಿ ದಾಳಿ ನಡೆಸಿದ ನಂತರ ತೈಲ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿದೆ. ಭಾರತದಲ್ಲಿಯೂ ಗೃಹಬಳಕೆಯ ಅಡುಗೆ ಅನಿಲದ ಬೆಲೆ ಹೆಚ್ಚಾಗಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಗೆ ಅಡ್ಡಿ ಉಂಟಾಗಿದ್ದು, ಹೋಟೆಲ್‌ಗಳನ್ನು ಬಂದ್ ಮಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ.

ಇರಾನ್‌ನ ಕರಾವಳಿಯ ಭಾಗವಾಗಿರುವ ಹೊರ್ಮುಜ್ ಜಲಸಂಧಿಯ ಮೂಲಕವೇ ಭಾರತದ ಶೇ 40–ಶೇ 50ರಷ್ಟು ತೈಲ ಸಾಗಣೆ ನಡೆಯುತ್ತದೆ; ಜತೆಗೆ, ಶೇ 50–ಶೇ 60ರಷ್ಟು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಶೇ 80–ಶೇ 85ರಷ್ಟು ಅಡುಗೆ ಅನಿಲ (ಎಲ್‌ಪಿಜಿ) ಕೂಡ ಇದೇ ಮಾರ್ಗದ ಮೂಲಕ ಭಾರತಕ್ಕೆ ತಲುಪುತ್ತಿತ್ತು.

**ಹೊರ್ಮುಜ್ ಹೊಡೆತ:** ಭಾರತಕ್ಕೆ ಹೊರ್ಮುಜ್ ಜಲಸಂಧಿ ಮೂಲಕ ಕುವೈತ್, ಸೌದಿ ಅರೇಬಿಯಾ, ಇರಾಕ್ ಮತ್ತು ಯುಎಇಗಳಿಂದ ಪ್ರತಿದಿನ 25 ಲಕ್ಷದಿಂದ 27 ಲಕ್ಷ ಬ್ಯಾರಲ್‌ಗಳಷ್ಟು ತೈಲ ಸರಬರಾಗುತ್ತಿತ್ತು. ಈಗ ಜಲಸಂಧಿ ಮೇಲೆ ಇರಾನ್ ಹಿಡಿತ ಸಾಧಿಸಿದೆ. ಕೊಲ್ಲಿ ರಾಷ್ಟ್ರಗಳು ಅಮೆರಿಕದ ಸೇನಾ ನೆಲೆಗಳಿಗೆ ಸ್ಥಳಾವಕಾಶ ಒದಗಿಸಿದ್ದು, ಇರಾನ್ ಅವುಗಳ ಮೇಲೆ ದಾಳಿ ನಡೆಸಿದೆ. ಹೀಗಾಗಿ ಹೊರ್ಮುಜ್ ಮೂಲಕ ಅಮೆರಿಕ ಮತ್ತು ಅರಬ್ ರಾಷ್ಟ್ರಗಳ ತೈಲ ಸಾಗಣೆ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಅದು ಈಗ ಭಾರತಕ್ಕೆ ಸಂಕಷ್ಟ ತಂದೊಡ್ಡಿದೆ.

ಭಾರತದಲ್ಲಿ ಪ್ರಸ್ತುತ ಕೆಲವು ವಾರಗಳಿಗೆ ಆಗುವಷ್ಟು ಮಾತ್ರ ಎಲ್‌ಪಿಜಿ ದಾಸ್ತಾನು ಇದೆ ಎನ್ನಲಾಗುತ್ತಿದೆ. ಗೃಹಬಳಕೆಯ ಎಲ್‌ಪಿಜಿ ಅನಿಲ ಪೂರೈಕೆ ಯಥಾಸ್ಥಿತಿಯಲ್ಲಿದ್ದರೂ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಬಹುತೇಕ ಹೋಟೆಲ್‌ಗಳಲ್ಲಿ ಎರಡು ದಿನಗಳಿಗಾಗುವಷ್ಟು ಅಡುಗೆ ಅನಿಲ ಮಾತ್ರ ಲಭ್ಯವಿದ್ದು, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಹೋಟೆಲ್‌ಗಳನ್ನು ಬಂದ್ ಮಾಡಬೇಕಾಗಬಹುದು ಎಂದು ಹೋಟೆಲ್ ಉದ್ಯಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಇದರಿಂದ ಹೋಟೆಲ್ ಉದ್ಯಮಕ್ಕೆ ಪೆಟ್ಟು ಬೀಳಲಿದೆ. ಜತೆಗೆ, ಊಟಕ್ಕಾಗಿ ಹೋಟೆಲ್‌ಗಳನ್ನೇ ನಂಬಿಕೊಂಡ ವಿದ್ಯಾರ್ಥಿಗಳು, ಉದ್ಯೋಗಿಗಳು ಮತ್ತಿತರರಿಗೆ ತೊಂದರೆಯಾಗಲಿದೆ. ಕೆಲವು ಹೋಟೆಲ್‌ಗಳು ವಿದ್ಯುತ್ ಸ್ಟೌನಂಥ ಪರ್ಯಾಯಗಳ ಮೊರೆ ಹೋಗಿದ್ದು, ಮೆನುವಿನಲ್ಲಿ ಬದಲಾವಣೆ ಮಾಡಿಕೊಂಡಿವೆ.

**ಗೃಹಬಳಕೆಗೆ ಆದ್ಯತೆ:** ದೇಶದಲ್ಲಿ ಗೃಹಬಳಕೆಯ ಅನಿಲ ಕೊರತೆ ಉಂಟಾಗಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಒಂದು ವರದಿಯ ಪ್ರಕಾರ, ದೇಶದಲ್ಲಿ ಒಟ್ಟು 33 ಕೋಟಿಗೂ ಹೆಚ್ಚು ಎಲ್‌ಪಿಜಿ ಗ್ರಾಹಕರಿದ್ದಾರೆ. ಪ್ರಸ್ತುತ, ಲಭ್ಯವಿರುವ ದಾಸ್ತಾನಿನಲ್ಲಿ ಅಡುಗೆ ಅನಿಲ ಪೂರೈಕೆಗೆ ಮೊದಲ ಪ್ರಾಶಸ್ತ್ಯ ನೀಡಲಾಗಿದೆ. ರಸಗೊಬ್ಬರ ವಲಯಕ್ಕೆ ಎರಡನೆಯ, ಟೀ ಪ್ಲಾಂಟೇಷನ್ಸ್, ಉತ್ಪಾದನಾ ವಲಯ ಮತ್ತು ಉದ್ಯಮ ವಲಯಕ್ಕೆ ಮೂರನೇ ಪ್ರಾಶಸ್ತ್ಯವನ್ನು ನೀಡಲಾಗಿದೆ. ಆದರೆ, ಅಡುಗೆ ಅನಿಲದ ಬೆಲೆಯನ್ನು ಹೆಚ್ಚಳ ಮಾಡಲಾಗಿದೆ. ಜತೆಗೆ, ಅನಿಲ ಪೂರೈಕೆಯ ನಿಯಮಗಳನ್ನು ಬಿಗಿಗೊಳಿಸಲಾಗಿದೆ. ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸುವಂತೆ ತೈಲ ಸಂಸ್ಕರಣಾ ಕಂಪನಿಗಳಿಗೆ ಕೇಂದ್ರವು ಸೂಚಿಸಿದೆ. ಇನ್ನೊಂದೆಡೆ, ಅಮೆರಿಕ, ಅಲ್ಜೀರಿಯಾ, ನಾರ್ವೆ, ಕೆನಡಾದಂತ ಹಲವು ದೇಶಗಳಿಂದ ಎಲ್‌ಪಿಜಿ ಆಮದಿನ ಸಾಧ್ಯತೆಗಳನ್ನು ಭಾರತವು ಪರಿಶೀಲಿಸುತ್ತಿದೆ. ಕೆಲವು ದೇಶಗಳ ಜತೆಗೆ ಒಪ್ಪಂದಗಳನ್ನೂ ಮಾಡಿಕೊಂಡಿದೆ. ಆದರೆ, ವಿವಿಧ ಕಾರಣಗಳಿಂದ ಸರಬರಾಜು ತಡವಾಗುತ್ತಿದೆ ಎಂದು ಅಧಿಕಾರಿಗಳ ಮೂಲವನ್ನು ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಪ್ರಸ್ತುತ ದೇಶದಲ್ಲಿ ಹಣದುಬ್ಬರ ಶೇ 2.75ರಷ್ಟಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಬ್ಯಾರಲ್‌ಗೆ 10 ಡಾಲರ್ ಹೆಚ್ಚಾದರೂ, ಹಣದುಬ್ಬರ ಶೇ 0.2–ಶೇ 0.25ರಷ್ಟು ಹೆಚ್ಚಾಗುತ್ತದೆ. ಜನರ ಮೇಲೆ ಹೊರೆ ಹೊರಿಸಬಾರದು ಎಂದರೆ, ಇಂಧನದ ಮೇಲಿನ ತೆರಿಗೆ ಇಳಿಸಬೇಕು. ಹಾಗೆ ತೆರಿಗೆ ಇಳಿಸಿದರೆ, ಸರ್ಕಾರದ ಆದಾಯದಲ್ಲಿ ಖೋತಾ ಆಗುತ್ತದೆ. ಯುದ್ಧ ಮುಂದುವರಿದಿದ್ದೇ ಆದರೆ, ಕೇಂದ್ರ ಸರ್ಕಾರ ಇನ್ನಷ್ಟು ಸಂದಿಗ್ಧಕ್ಕೆ ಸಿಲುಕಲಿದೆ.

(ಕೋಟಿ ಟನ್‌ಗಳಲ್ಲಿ) (ಆವರಣದಲ್ಲಿರುವುದು ಮೌಲ್ಯ– ಲಕ್ಷ ಕೋಟಿಗಳಲ್ಲಿ)

| | 2023-24 | 2024-25 | 2025-26* |
|---|---|---|---|
| ಕಚ್ಚಾ ತೈಲದ ಆಮದು | 23.43 (₹11.05) | 24.32 (₹11.67) | 20.62 (₹8.80) |
| ಪೆಟ್ರೋಲಿಯಂ ಉತ್ಪನ್ನಗಳ ಆಮದು | 4.87 (₹1.9) | 5.09 (₹2) | 4.16 (₹1.58) |
| ದ್ರವೀಕೃತ ನೈಸರ್ಗಿಕ ಅನಿಲದ ಆಮದು | 2.4 (₹1.19) | 2.7 (₹1.26) | 2.2 (₹0.99) |

*ಜನವರಿವರೆಗೆ

## ರಷ್ಯಾದಿಂದ ತೈಲ: ತಾತ್ಕಾಲಿಕ ಪರಿಹಾರ

ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿದೆ ಎಂದು ಭಾರತದ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿತ್ತು, ನಂತರ ರಷ್ಯಾದಿಂದ ತೈಲ ಖರೀದಿ ಕಡಿಮೆ ಮಾಡಿರುವುದಾಗಿ ಭಾರತ ಹೇಳಿದೆ ಎಂದು ಅಮೆರಿಕ ಪ್ರತಿಪಾದಿಸಿತ್ತು. ಇದೀಗ ಯುದ್ಧದಿಂದಾಗಿ ಭಾರತಕ್ಕೆ ರಷ್ಯಾ ತೈಲ ಖರೀದಿಸಲು ಒಂದು ತಿಂಗಳ ಮಟ್ಟಿಗೆ ಅನುಮತಿ ನೀಡಿರುವುದಾಗಿ ಅಮೆರಿಕ ಹೇಳಿದೆ. ಈಗಾಗಲೇ ಸಾಗಣೆ ಹಂತದಲ್ಲಿರುವ ರಷ್ಯಾ ತೈಲವನ್ನು ಖರೀದಿಸಲು ಭಾರತಕ್ಕೆ ಅನುಮತಿ ನೀಡಿದ್ದೇವೆ ಎಂದು ಅದು ತಿಳಿಸಿದೆ. ಪ್ರಸ್ತುತ 14.5 ಕೋಟಿ ಬ್ಯಾರಲ್‌ಗಳಷ್ಟು ತೈಲವು ಸಮುದ್ರದಲ್ಲಿರುವ ಹಡಗುಗಳಲ್ಲಿ ಇದ್ದು, ಅವುಗಳನ್ನು ಭಾರತದತ್ತ ತಿರುಗಿಸುವ ಸಂಭವ ಇದೆ. ಭಾರತದ ಒಟ್ಟು ತೈಲ ಅಗತ್ಯದಲ್ಲಿ ಶೇ 20ರಷ್ಟನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ಇದೊಂದು ತಾತ್ಕಾಲಿಕ ಕ್ರಮವಾಗಿದ್ದು, ಇದು ಭಾರತದ ತೈಲ ಕೊರತೆಯ ಬಿಕ್ಕಟ್ಟನ್ನು ಶಮನ ಮಾಡಲಾರದು ಎನ್ನುವ ವಿಶ್ಲೇಷಣೆ ಇದೆ.

## ದೇಶದಲ್ಲಿ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಬಳಕೆ

(ಕೋಟಿ ಟನ್‌ಗಳಲ್ಲಿ)

| | ಎಲ್‌ಪಿಜಿ | ಪೆಟ್ರೋಲ್ | ಡೀಸೆಲ್ |
|---|---|---|---|
| 2023-24 | 2.97 | 3.72 | 8.96 |
| 2024-25 | 3.13 | 4.00 | 9.14 |
| 2025-26* | 3.09 | 3.88 | 8.60 |

*ಫೆಬ್ರುವರಿವರೆಗೆ

## ಇರಾನ್ ಅತೃಪ್ತಿ

ಅರಬ್ ರಾಷ್ಟ್ರಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಖಂಡಿಸಿದ್ದರು. ಆದರೆ, ಆಯತೊಲ್ಲಾ ಖಮೇನಿ ಅವರ ಸಾವಿನ ಬಗ್ಗೆ ಪ್ರಧಾನಿ ಮೌನ ವಹಿಸಿದರು. ಕೊನೆಗೆ, ಹಲವು ದಿನಗಳ ನಂತರ ವಿದೇಶಾಂಗ ಕಾರ್ಯದರ್ಶಿ ಇರಾನ್ ರಾಯಭಾರಿ ಕಚೇರಿಯ ಪುಸ್ತಕದಲ್ಲಿ ಸಂತಾಪ ಸಂದೇಶವನ್ನು ದಾಖಲಿಸಿದ್ದರು. ಇರಾನ್ ಮೇಲಿನ ಅಮೆರಿಕ–ಇಸ್ರೇಲ್ ದಾಳಿಯನ್ನು ಭಾರತ ಸ್ಪಷ್ಟವಾಗಿ ಖಂಡಿಸಲೇ ಇಲ್ಲ ಎನ್ನುವ ಅಸಮಾಧಾನವೂ ಇರಾನ್‌ಗೆ ಇದೆ ಎನ್ನಲಾಗುತ್ತಿದೆ.

## ಭಾರತದ ಇಂಧನ ಆಮದು, ಬಳಕೆಯ ನೋಟ

- ರಷ್ಯಾ, ಸೌದಿ ಅರೇಬಿಯಾ, ಯುಎಇ, ಇರಾಕ್, ಕತಾರ್ ಸೇರಿದಂತೆ ಮೊದಲು **27** ದೇಶಗಳಿಂದ ಖರೀದಿಸಲಾಗುತ್ತಿತ್ತು. ಈಗ ಈ ಸಂಖ್ಯೆಯನ್ನು **40** ದೇಶಗಳಿಗೆ ಹೆಚ್ಚಿಸಲಾಗಿದೆ
- ಅಂದಾಜಿನ ಪ್ರಕಾರ, ದಿನವೊಂದಕ್ಕೆ **50** ಲಕ್ಷ ಬ್ಯಾರಲ್ ತೈಲವನ್ನು ಬಳಸುತ್ತದೆ
- ಸದ್ಯ ದೇಶದಲ್ಲಿ **4,000** ಕೋಟಿ ಲೀಟರ್‌ಗಳಷ್ಟು ತೈಲ ಲಭ್ಯವಿದೆ
- ತುರ್ತು ಅವಶ್ಯಕತೆಗೆ ಬಳಸಲು ನಿರ್ಮಿಸಲಾಗಿರುವ ತೈಲ ಸಂಗ್ರಹಾಗಾರಗಳಲ್ಲಿ **53.3** ಲಕ್ಷ ಟನ್‌ಗಳಷ್ಟು ತೈಲ ಇದೆ
- ದೇಶದಾದ್ಯಂತ **33** ಕೋಟಿಯಷ್ಟು ಎಲ್‌ಪಿಜಿ (ಅಡುಗೆ ಅನಿಲ) ಬಳಕೆದಾರರಿದ್ದಾರೆ. ವರ್ಷದ ಎಲ್‌ಪಿಜಿ ಬಳಕೆ **3** ಲಕ್ಷ ಟನ್‌ಗಳಷ್ಟಿದೆ
- ದೇಶವು ವಾರ್ಷಿಕವಾಗಿ **5.4** ಕೋಟಿ ಟನ್‌ಗಳಷ್ಟು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಬಳಸುತ್ತದೆ
- ಅಗತ್ಯವಿರುವ ಎಲ್‌ಎನ್‌ಜಿಯಲ್ಲಿ ಅರ್ಧದಷ್ಟು ದೇಶದಲ್ಲಿ ಉತ್ಪಾದನೆಯಾಗುತ್ತಿದ್ದರೆ, ಉಳಿದ ಅರ್ಧವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ
- ವರ್ಷಕ್ಕೆ ಸರಾಸರಿ **2.5** ಕೋಟಿ ಟನ್‌ಗಳಷ್ಟು ಅನಿಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಎಲ್‌ಎನ್‌ಜಿಯನ್ನು ಅತಿ ಹೆಚ್ಚು ಆಮದು ಮಾಡಿಕೊಳ್ಳುತ್ತಿರುವ ಜಗತ್ತಿನ ನಾಲ್ಕನೇ ರಾಷ್ಟ್ರ ಭಾರತ
- ಕತಾರ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡರೆ, ಅಮೆರಿಕ, ಆಸ್ಟ್ರೇಲಿಯಾ, ರಷ್ಯಾ ಕೂಡ ನೈಸರ್ಗಿಕ ಅನಿಲವನ್ನು ಪೂರೈಸುತ್ತವೆ

## ಯುದ್ಧ ಮುಂದುವರಿದರೆ ಏನಾಗುತ್ತದೆ?

- ತೈಲದ ದರ ಏರಬಹುದು
- ಪರಿಣಾಮ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್, ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಾಗಬಹುದು
- ಬೇಡಿಕೆ, ಪೂರೈಕೆಯಲ್ಲಿ ವ್ಯತ್ಯಯವಾಗಿ ಎಲ್‌ಪಿಜಿ, ಡೀಸೆಲ್, ಪೆಟ್ರೋಲ್ ಕೊರತೆ ಉಂಟಾಗಬಹುದು
- ಹಣದುಬ್ಬರ ಜಾಸ್ತಿಯಾಗಿ, ಗ್ರಾಹಕರ ಜೇಬಿಗೆ ಹೊರೆಯಾಗಬಹುದು
- ಅಗತ್ಯ ವಸ್ತುಗಳ ದರ ಜಾಸ್ತಿಯಾಗುವುದರಿಂದ ಜನ ಜೀವನಕ್ಕೆ ತೊಂದರೆಯಾಗಬಹುದು

## ಪಶ್ಚಿಮ ಏಷ್ಯಾದೊಂದಿಗೆ ಸಂಬಂಧ

ಪಶ್ಚಿಮ ಏಷ್ಯಾ ಹಲವು ರೀತಿಗಳಿಂದ ಭಾರತಕ್ಕೆ ಮುಖ್ಯವಾಗಿದೆ. ಭಾರತದ ಶೇ 17ರಷ್ಟು ರಫ್ತುಗಳು ಈ ದೇಶಗಳಿಗೆ ಹೋಗುತ್ತವೆ. ಈ ದೇಶಗಳಿಂದ ಶೇ 55ರಷ್ಟು ತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಭಾರತದ ಸುಮಾರು ಒಂದು ಕೋಟಿ ಮಂದಿ ಪಶ್ಚಿಮ ಏಷ್ಯಾದ ರಾಷ್ಟ್ರಗಳಲ್ಲಿ ಉದ್ಯೋಗನಿರತರಾಗಿದ್ದಾರೆ. ವಿದೇಶಗಳಲ್ಲಿರುವ ಭಾರತೀಯ ಉದ್ಯೋಗಿಗಳು ತಮ್ಮ ಕುಟುಂಬಗಳಿಗೆ ಸಂದಾಯ ಮಾಡುವ ಒಟ್ಟು ಮೊತ್ತದಲ್ಲಿ ಶೇ 38ರಷ್ಟು ಪಶ್ಚಿಮ ಏಷ್ಯಾದ ರಾಷ್ಟ್ರಗಳಿಂದಲೇ ಬರುತ್ತದೆ. ಈ ದಿಸೆಯಲ್ಲಿ ಭಾರತವು ಅಮೆರಿಕ, ಇರಾನ್ ಮತ್ತು ಕೊಲ್ಲಿ ರಾಷ್ಟ್ರಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಾಯ್ದುಕೊಳ್ಳಲು ಪ್ರಯಾಸ ಪಡುವಂತಾಗಿದೆ.

## ❖ ಬ್ಯಾಡಗಿ ಮೆಣಸಿನಕಾಯಿ ರಫ್ತು ಸ್ಥಗಿತ


**ಸಂದರ್ಭ: ಯುದ್ದದ ಪರಿಣಾಮ 'ಬ್ಯಾಡಗಿ ಮೆಣಸಿನಕಾಯಿ' ರಫ್ತು, ವಹಿವಾಟಿನ ಮೇಲೆ ಪರಿಣಾಮ ಬೀರಿದೆ' ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಾಜಿ ಅಧ್ಯಕ್ಷ ಹಾಗೂ ಉದ್ಯಮಿ ಎಸ್.ಆರ್.ಪಾಟೀಲ ತಿಳಿಸಿದರು.**

- ಜೊತೆ ಮಾತನಾಡಿದ ಅವರು, 'ಕೊಲ್ಲಿ ಹಾಗೂ ಅರಬ್ ರಾಷ್ಟ್ರಗಳಿಗೆ ಬ್ಯಾಡಗಿ ಮೆಣಸಿನ ಕಾಯಿ ರಫ್ತು ಮಾಡಲಾಗುತ್ತಿತ್ತು. ಯುದ್ದದಿಂದ ಈಗ ವರ್ತಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇದು ಸ್ಥಳೀಯ ಮಾರುಕಟ್ಟೆಯ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಬೇಡಿಕೆ ಇಲ್ಲದೆ ದರದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಹೆಚ್ಚಿದೆ' ಎಂದರು.

## ❖ ಎಫ್‌ಡಿಐ ನಿಯಮ ಸಡಿಲಿಸಿದ ಕೇಂದ್ರ ಸರ್ಕಾರ

**ಸಂದರ್ಭ: ಚೀನಾ ಸೇರಿದಂತೆ ಭಾರತದೊಂದಿಗೆ ಭೂ ಗಡಿ ಹಂಚಿಕೊಂಡಿರುವ ಎಲ್ಲ ದೇಶಗಳಿಗೆ ಕೇಂದ್ರ ಸರ್ಕಾರ ಮಂಗಳವಾರ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮಗಳನ್ನು ಸಡಿಲಗೊಳಿಸಿದೆ.**

- ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.
- ಆರ್ಥಿಕ ಬೆಳವಣಿಗೆ ಹೆಚ್ಚಿಸಲು, ವಿದೇಶಿ ಹೂಡಿಕೆ ಪ್ರಸ್ತಾವಗಳಿಗೆ ವೇಗವಾಗಿ ಅನುಮೋದನೆ ನೀಡಲು 2020ರ ಪತ್ರಿಕಾ ಟಿಪ್ಪಣಿ-3ಕ್ಕೆ ತಿದ್ದುಪಡಿ ತರಲಾಗಿದೆ.
- ಈ ತಿದ್ದುಪಡಿ ಅನ್ವಯ. ಯಾವುದೇ ವಿದೇಶಿ ಕಂಪನಿ ಭಾರತದಲ್ಲಿ ಯಾವುದೇ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮುನ್ನ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.
- ಭಾರತದೊಂದಿಗೆ ಭೂ ಗಡಿ ಹಂಚಿಕೊಂಡಿರುವ ಚೀನಾ, ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಘಾನಿಸ್ತಾನದಿಂದ ಹೆಚ್ಚಿನ ಹೂಡಿಕೆ ಆಕರ್ಷಿಸುವ ನಿಟ್ಟಿನಲ್ಲಿ ಎಫ್‌ಡಿಐ ನಿಯಮಗಳನ್ನು ಸಲಿಸಲಾಗಿದೆ.
- ಚೀನಾವು ಭಾರತದಲ್ಲಿ ಎಫ್‌ಡಿಐ ಮೂಲಕ 2000ರ ಏಪ್ರಿಲ್‌ನಿಂದ 2025ರ ಡಿಸೆಂಬರ್‌ವರೆಗೆ ಒಟ್ಟು 2.51 ಬಿಲಿಯನ್ ಡಾಲರ್ (ಅಂದಾಜು ₹23 ಸಾವಿರ ಕೋಟಿ) ಹೂಡಿಕೆ ಮಾಡಿದೆ. ಈ ಅವಧಿಯಲ್ಲಿ ಭಾರತಕ್ಕೆ ಹರಿದುಬಂದ ಒಟ್ಟು ಎಫ್‌ಡಿಐನಲ್ಲಿ ಚೀನಾದ ಪಾಲು ಶೇ0.32ರಷ್ಟಿದೆ. ಭಾರತದಲ್ಲಿ ವಿದೇಶಿ ನೇರ ಹೂಡಿಕೆ ಮಾಡಿರುವ ದೇಶಗಳ ಪಟ್ಟಿಯಲ್ಲಿ ಚೀನಾ 23ನೇ ಸ್ಥಾನದಲ್ಲಿದೆ.
- ಗಾಲ್ವಾನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ನಡೆದಿದ್ದ ಘರ್ಷಣೆಯ ನಂತರ ಭಾರತ-ಚೀನಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧ ಹಳಸಿತ್ತು. ಭಾರತವು ಟಿಕ್‌ಟಾಕ್, ವಿ-ಚಾಟ್ ಸೇರಿದಂತೆ ಚೀನಾದ 200ಕ್ಕೂ ಹೆಚ್ಚು ಮೊಬೈಲ್ ಆಪ್ಲಿಕೇಷನ್‌ಗಳ ಮೇಲೆ ನಿರ್ಬಂಧ ಹೇರಿತ್ತು ಬೆನ್ನಲ್ಲೇ, ಚೀನಾದಿಂದ ಭಾರತಕ್ಕೆ ಎಫ್‌ಡಿಐ ಒಳಹರಿವು ಗಣನೀಯವಾಗಿ ಕಡಿಮೆಯಾಗಿತ್ತು



## ❖ ದಯಾಮರಣಕ್ಕೆ ಅನುಮತಿ

**ಸಂದರ್ಭ: ಹನ್ನೆರಡು ವರ್ಷದಿಂದಲೂ ಕೋಮಾದಲ್ಲಿರುವ 32 ವರ್ಷದ ಯುವಕನ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ.**

- ಗಾಜಿಯಾಬಾದ್‌ನ ಹರೀಶ್ ರಾಣಾ 'ಸುಪ್ರೀಂ'ನಿಂದ ದಯಾಮರಣಕ್ಕೆ ಅವಕಾಶ ಪಡೆದವರು. ದಯಾಮರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ಮಹತ್ವದ ಮೊದಲ ತೀರ್ಪು ಇದಾಗಿದೆ. ದೀರ್ಘಕಾಲ ಚರ್ಚಿಸಲಾದ ಈ ಭಾವನಾತ್ಮಕ ವಿಷಯದ ಬಗ್ಗೆ ತೀರ್ಪುನೀಡಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠವು, ದಯಾಮರಣದ ಕುರಿತು ಸಮಗ್ರ ಕಾಯ್ದೆಯೊಂದನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.
- ಪಂಜಾಬ್ ವಿಶ್ವವಿದ್ಯಾಲಯದ ಬಿ.ಟೆಕ್ ವಿದ್ಯಾರ್ಥಿಯಾಗಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ ಅವರು 2013ರಲ್ಲಿ ತಾವು ವಾಸವಿದ್ದ ವಸತಿಗೃಹದ ನಾಲ್ಕನೇ ಮಹಡಿಯಿಂದ ಬಿದ್ದಿದ್ದರಿಂದ, ತಲೆಗೆ ಗಂಭೀರ ಗಾಯಗಳಾಗಿದ್ದವು. ಆಗಿನಿಂದಲೂ ಅವರು ಕೋಮಾದಲ್ಲಿದ್ದರು (ದೀರ್ಘಕಾಲದ ಅಸಹಜ ಪ್ರಜ್ಞಾಶೂನ್ಯ ಸ್ಥಿತಿ).
- ಪೈಪ್ ಮೂಲಕ ನೀಡುತ್ತಿರುವ ಪೌಷ್ಟಿಕಾಂಶಯುಕ್ತ ಆಹಾರದಿಂದಲೇ ಹರೀಶ್ ಅವರ ಜೀವ ಉಳಿದಿದೆ ಎಂಬುದನ್ನು ನ್ಯಾಯಾಲಯವು ಪರಿಗಣಿಸಿತು. ಪ್ರಸ್ತುತ ಉಪಶಾಮಕ ಆರೈಕೆಯಲ್ಲಿರುವ ಅವರಿಗೆ ನೀಡಲಾಗುತ್ತಿರುವ ವೈದ್ಯಕೀಯ ಚಿಕಿತ್ಸೆಯನ್ನು ಹಿಂತೆಗೆದುಕೊಳ್ಳುವಂತೆ ನ್ಯಾಯಪೀಠವು ನವದೆಹಲಿಯ ಏಮ್ಸ್‌ಗೆ ನಿರ್ದೇಶಿಸಿತು ಜೀವರಕ್ಷಕ ವ್ಯವಸ್ಥೆಯ ಹಿಂಪಡೆಯುವಿಕೆಯನ್ನು ಮಾನವೀಯ ರೀತಿಯಲ್ಲಿ ಕೈಗೊಳ್ಳಬೇಕು. ಘನತೆಯನ್ನು ಕಾಪಾಡಿಕೊಳ್ಳಲು ಅನುಗುಣವಾದ ಯೋಜನೆಯೊಂದಿಗೆ ಚಿಕಿತ್ಸೆಯನ್ನು ಹಿಂಪಡೆಯ ಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದೂ ಪೀಠ ಹೇಳಿದೆ.



**'ದಯಾಮರಣ ಮೂಲಭೂತ ಹಕ್ಕು'**

ವ್ಯಕ್ತಿಯೊಬ್ಬರು ಘನತೆಯಿಂದ ದಯಾಮರಣ ಹೊಂದುವುದು ಸಹ ಮೂಲಭೂತ ಹಕ್ಕು ಎಂಬುದನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, 2018ರಲ್ಲಿ ಮಾನದಂಡಗಳನ್ನು ರೂಪಿಸಿತು (ಕಾಮನ್ ಕಾಸ್ ತೀರ್ಪು). 2023ರಲ್ಲಿ ಇದನ್ನು ಮಾರ್ಪಡಿಸಿದೆ.

ದಯಾಮರಣ ಮತ್ತು ಘನತೆಯಿಂದ ಸಾಯುವ ಹಕ್ಕನ್ನು ಸಂವಿಧಾನದ ವಿಧಿ 21ರ ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 2018ರ ತೀರ್ಪಿನಲ್ಲಿ ಹೇಳಿದೆ.

ದೀರ್ಘಕಾಲದಿಂದಲೂ ಗುಣಮುಖರಾಗದ ಅನಾರೋಗ್ಯಪೀಡಿತರಿಗೆ ದಯಾಮರಣ ನೀಡುವ ಪ್ರಕ್ರಿಯೆಯನ್ನು ಸುಲಭಗೊಳಿಸಲು 2018ರಲ್ಲಿ ರೂಪಿಸಿದ್ದ ದಯಾಮರಣದ ಮಾರ್ಗಸೂಚಿಗಳನ್ನು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 2023ರ ಜ.24ರಂದು ಮಾರ್ಪಡಿಸಿತು.

ಸುಪ್ರೀಂ ಕೋರ್ಟ್ 2023ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ, ಕೋಮಾದಲ್ಲಿರುವ ರೋಗಿಗೆ ಅಳವಡಿಸಲಾಗಿರುವ ಕೃತಕ ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ತಜ್ಞರ ಅಭಿಪ್ರಾಯಕ್ಕಾಗಿ ಪ್ರಾಥಮಿಕ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿ ರಚಿಸಬೇಕಿದೆ.

ದಯಾಮರಣವು ಜೀವ ರಕ್ಷಕವನ್ನು ತಡೆಹಿಡಿಯುವ ಅಥವಾ ಹಿಂತೆಗೆದುಕೊಳ್ಳುವ ಮೂಲಕ ರೋಗಿಯು ಮರಣ ಹೊಂದುವಂತೆ ಮಾಡುವ ಉದ್ದೇಶಪೂರ್ವಕ ಕ್ರಿಯೆ ಆಗಿದೆ.

**ಅರುಣಾ ಶಾನಭಾಗ್‌ಗೆ ಸಿಕ್ಕಿರಲಿಲ್ಲ ಅವಕಾಶ**

ತಾನು ಕೆಲಸ ಮಾಡುತ್ತಿದ್ದ ಮುಂಬೈನ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲೇ ವಾರ್ಡ್ ಬಾಯ್‌ನಿಂದ ಘೋರ ಹಲ್ಲೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ 42 ವರ್ಷ ಕೋಮಾದಲ್ಲಿದ್ದ ಶುಶ್ರೂಷಕಿ ಅರುಣಾ ಶಾನಭಾಗ್ ಅವರಿಗೆ ಸುಪ್ರೀಂ ಕೋರ್ಟ್ 2011ರಲ್ಲಿ ದಯಾಮರಣ ನಿರಾಕರಿಸಿತ್ತು. 6

ತಾನು ಕೆಲಸ ಮಾಡುತ್ತಿದ್ದ ಮುಂಬೈನ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲೇ ವಾರ್ಡ್ ಬಾಯ್‌ನಿಂದ ಘೋರ ಹಲ್ಲೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ 42 ವರ್ಷ ಕೋಮಾದಲ್ಲಿದ್ದ ಶುಶ್ರೂಷಕಿ ಅರುಣಾ ಶಾನಭಾಗ್ ಅವರಿಗೆ ಸುಪ್ರೀಂ ಕೋರ್ಟ್ 2011ರಲ್ಲಿ ದಯಾಮರಣ ನಿರಾಕರಿಸಿತ್ತು.

1948ರ ಜೂನ್ ಒಂದರಂದು ಜನಿಸಿದ್ದ ಅರುಣಾ ಅವರು 2015ರ ಮೇ 18ರಂದು ನಿಧನರಾದರು. 1973ರ ನವೆಂಬರ್‌ನಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರು.

ಅರುಣಾ ಶಾನಭಾಗ್ ಅವರ ಮೂಲ ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಳದೀಪುರ. ರಾಷ್ಟ್ರೀಯ ಹೆದ್ದಾರಿ-17ರಲ್ಲಿರುವ ಇದನ್ನು ವರಾಹಪುರ ಎಂದು ಕರೆಯಲಾಗುತ್ತಿತ್ತು.

ದಯಾಮರಣಕ್ಕೆ ಅವಕಾಶ ನೀಡುವಂತೆ ಅರುಣಾ ಅವರ ಗೆಳತಿ ಪಿಂಕಿ ವಿರಾನಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

- ಹರೀಶ್ ಅವರಿಗೆ ನೀಡುತ್ತಿರುವ ಚಿಕಿತ್ಸೆಯ ವಿವರಗಳ ಕುರಿತು ನವದೆಹಲಿಯ ಏಮ್ಸ್ ನ ತಜ್ಞ ವೈದ್ಯರನ್ನು ಒಳಗೊಂಡ ಎರಡನೇ ವೈದ್ಯಕೀಯ ಮಂಡಳಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ ನ್ಯಾಯಾಲಯವು, 'ಇದು 'ದುಃಖ'ದ ವರದಿ' ಎಂದಿದೆ.
- ಪ್ರಾಥಮಿಕ ವೈದ್ಯಕೀಯ ಮಂಡಳಿಯು ರೋಗಿಯ ಆರೋಗ್ಯ ಸ್ಥಿತಿಯನ್ನು ಕೂಲಂಕಷವಾಗಿ ಪರೀಕ್ಷಿಸಿದ ನಂತರ, ಅವರ ಚೇತರಿಕೆಯ ಅವಕಾಶ ಅತ್ಯಲ್ಪ ಎಂದಿತ್ತು ಎರಡೂ ವರದಿಗಳ ಪ್ರಕಾರ 'ಯುವಕನ ಆರೋಗ್ಯ ಕರುಣಾಜನಕ ಸ್ಥಿತಿಯಲ್ಲಿದೆ' ಎಂಬುದನ್ನು ಡಿ. 11ರಂದು ನ್ಯಾಯಾಲಯ ಗಮನಿಸಿದೆ.
- ಚಿಕಿತ್ಸೆಯ ಮುಂದುವರಿಕೆಯು ಯಾವುದೇ ಚೇತರಿಕೆಯ ಸಾಧ್ಯತೆ ಇಲ್ಲದೆ, ಜೈವಿಕ ಅಸ್ತಿತ್ವವನ್ನಷ್ಟೇ ದೀರ್ಘಕಾಲದವರೆಗೆ ಮುಂದುವರಿಸಿದೆ ಎಂದು ಎರಡೂ ವೈದ್ಯಕೀಯ ಮಂಡಳಿಗಳು ಸರ್ವಾನುಮತದಿಂದ ತೀರ್ಮಾನಿಸಿವೆ.

- ಪ್ರಾಥಮಿಕ ಹಾಗೂ ದ್ವಿತೀಯ ಮಂಡಳಿಗಳು ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆನ್ನು ಕೊಳ್ಳುವುದನ್ನು ಪ್ರಮಾಣೀಕರಿಸಿದಾಗ, ನ್ಯಾಯಾಂಗದ ಮಧ್ಯಸ್ಥಿಕೆಯ ಅಗತ್ಯವಿಲ್ಲ ಎಂದು ಹೇಳಿರುವ ಪೀಠವು, ತಮ್ಮ ಮಗನ ಕುರಿತು ಅಪಾರ ಪ್ರೀತಿ ಮತ್ತು ಕಾಳಜಿ ತೋರಿದ ಹರೀಶ್ ಹೆತ್ತವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ.



## ಘನತೆಯ ಮರಣ: ಹರೀಶ್ ರಾಣಾ ಕುಟುಂಬ

**ಲಖನೌ:** 'ಕೃತಕ ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆಯಲು ಅವಕಾಶ ನೀಡುವುದರಿಂದ, ದಶಕದಿಂದಲೂ ಅನುಭವಿಸುತ್ತಿರುವ ಸಂಕಟದಿಂದ ಆತನನ್ನು (ಹರೀಶ್) ಮುಕ್ತಗೊಳಿಸಿ ಘನತೆಯ ಮರಣವನ್ನು ದಯಪಾಲಿಸಿದಂತಾಗುತ್ತದೆ' ಎಂದು ಹರೀಶ್ ರಾಣಾ ಅವರ ಕುಟುಂಬವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮನವಿಯಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ಕೆಲವೇ ಹೊತ್ತಿನಲ್ಲಿ ಮಾಧ್ಯಮದವರನ್ನು ಒಳಗೊಂಡ ಜನಸಮೂಹವು ರಾಣಾ ಅವರ ಕುಟುಂಬ ವಾಸವಿರುವ ಗಾಜಿಯಾಬಾದ್‌ನ ಬ್ರಹ್ಮ ರಾಜ್ ಎಂಪೈರ್ ಸೊಸೈಟಿಯ ಹೊರಗೆ ಜಮಾಯಿಸಿತ್ತು.

ವಸತಿ ಸಂಕೀರ್ಣದ ಭದ್ರತಾ ಸಿಬ್ಬಂದಿಯು ಹೊರಗಿನ ಯಾರೊಬ್ಬರೂ ಒಳಗೆ ಪ್ರವೇಶಿಸದಂತೆ ತಡೆದರು.

ಹರೀಶ್ ಅವರ ತಂದೆ ಅಶೋಕ್ ರಾಣಾ ಅವರನ್ನು ಸುದ್ದಿಸಂಸ್ಥೆ ಸಂಪರ್ಕಿಸಿದರೂ ಅವರು ಪ್ರತಿಕ್ರಿಯಿಸಲಿಲ್ಲ. ಈ ಪ್ರಕರಣದಲ್ಲಿ ರಾಣಾ ಪರ ವಾದ ಮಂಡಿಸಿದ ವಕೀಲರಾದ ರಶ್ಮಿ ನಂದಕುಮಾರ್ ಅವರು, 'ಕುಟುಂಬದ ಸದಸ್ಯರು ಈ ಬೆಳವಣಿಗೆ ಕುರಿತಂತೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸುವ ಸ್ಥಿತಿಯಲ್ಲಿ ಇಲ್ಲ' ಎಂದು ತಿಳಿಸಿದರು.

ಮಗನ ಚಿಕಿತ್ಸೆಗಾಗಿ ಅಶೋಕ್– ನಿರ್ಮಲಾ ದಂಪತಿ ನವದೆಹಲಿಯಲ್ಲಿದ್ದ ತಮ್ಮ ಮನೆಯನ್ನು ಮಾರಿದ್ದರು ಎಂದು ನೆರೆಹೊರೆಯವರು ಮಾಹಿತಿ ನೀಡಿದರು.

**ಫುಟ್‌ಬಾಲ್ ಪ್ರೇಮಿ:** 'ಹರೀಶ್ ನಾನು ಒಟ್ಟಿಗೆ ಫುಟ್‌ಬಾಲ್ ಹಾಗೂ ವಿಡಿಯೊ ಗೇಮ್‌ಗಳನ್ನು ಆಡುತ್ತಿದ್ದೆವು' ಎಂದು ಆತನ ಸಹೋದರ ಆಶಿಶ್ ನೆನಪಿಸಿಕೊಂಡರು.




# ಏರಿಕೆಯತ್ತ ಬದ್ಧವೆಚ್ಚದ ದಾಪುಗಾಲು

## ಬಂಡವಾಳ ವೆಚ್ಚ ಹಂಚಿಕೆಯ ಅವಕಾಶದ ಮೇಲೆ ಪ್ರಭಾವ ಮಧ್ಯಮಾವಧಿ ವಿತ್ತೀಯ ಮುನ್ನಂದಾಜಿನಲ್ಲಿ ಉಲ್ಲೇಖ

• ಜಯಸಿಂಹ ಆರ್.

**ಬೆಂಗಳೂರು:** ವೇತನ, ಪಿಂಚಣಿ ಮತ್ತು ಬಡ್ಡಿ ಪಾವತಿಯಂತಹ ಬದ್ಧವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ.

2026-27ನೇ ಸಾಲಿನಲ್ಲಿ ₹1.86 ಲಕ್ಷ ಕೋಟಿಯಷ್ಟಿರುವ ಬದ್ಧವೆಚ್ಚವು, 2029-30ನೇ ಸಾಲಿನಲ್ಲಿ ₹2.44 ಲಕ್ಷ ಕೋಟಿಗೆ ಏರಿಕೆಯಾಗಲಿದೆ.

ಬದ್ಧವೆಚ್ಚದಲ್ಲಿನ ಹೆಚ್ಚಳವು ಬಂಡವಾಳ ವೆಚ್ಚ ಹಂಚಿಕೆಗೆ ಹಣಕಾಸಿನ ಲಭ್ಯತೆಯನ್ನು ಕಡಿಮೆ ಮಾಡುತ್ತದೆ. ಇವುಗಳ ಮಧ್ಯೆ ಸರ್ಕಾರವು ಸಮತೋಲನ ಸಾಧಿಸುವುದು ಅಗತ್ಯ ಎನ್ನುತ್ತದೆ 2026-30ನೇ ಮಧ್ಯಮಾವಧಿ ವಿತ್ತೀಯ ಮುನ್ನಂದಾಜು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮತ್ತು ಅದರ ಪರಿಣಾಮವಾಗಿ ಪಿಂಚಣಿಯಲ್ಲಿನ ಬದಲಾವಣೆಯು ಪ್ರತಿ ಆರ್ಥಿಕ ವರ್ಷದಲ್ಲೂ ಏರಿಕೆಯಾಗುತ್ತಿದೆ. 2026-27ನೇ ಸಾಲಿನಲ್ಲಿ ಸರ್ಕಾರವು ನೇಮಕಾತಿ ಪ್ರಕ್ರಿಯೆ ನಡೆಸುವುದರಿಂದ ಈ ವೆಚ್ಚದಲ್ಲಿ ಇನ್ನಷ್ಟು ಏರಿಕೆ ಆಗಬಹುದು ಎಂಬ ವಿಶ್ಲೇಷಣೆ ಮುನ್ನಂದಾಜಿನಲ್ಲಿದೆ.

ಸಿಬ್ಬಂದಿಯ ಹಿತಾಸಕ್ತಿ ಕಾಪಾಡಲು ಮತ್ತು ಸಾರ್ವಜನಿಕ ಸೇವೆಗಳ ಪರಿಣಾಮಕಾರಿ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಈ ಎರಡೂ ವೆಚ್ಚಗಳನ್ನು ಹೆಚ್ಚಿಸಬೇಕಾದ ಅನಿವಾರ್ಯ ಇದೆ. ಇದು ರಾಜ್ಯದ ಹಣಕಾಸು ಸ್ಥಿತಿಯ ಮೇಲೆ ಗಣನೀಯ ಪರಿಣಾಮ ಬೀರುವುದಲ್ಲದೆ, ಬಂಡವಾಳ ವೆಚ್ಚ ಹಂಚಿಕೆಗೆ ವಿತ್ತೀಯ ಅವಕಾಶಗಳನ್ನು ಕಡಿಮೆ ಮಾಡುತ್ತದೆ ಎಂಬುದನ್ನು ಮುನ್ನಂದಾಜಿನಲ್ಲಿ ವಿಶ್ಲೇಷಿಸಲಾಗಿದೆ.


ಜತೆಗೆ, ಅಭಿವೃದ್ಧಿ ಮತ್ತು ಬಂಡವಾಳ ವೆಚ್ಚಗಳಿಗೆ ಸೂಕ್ತ ಆದ್ಯತೆ ನೀಡಬೇಕಾಗುತ್ತದೆ ಎಂದೂ ಹೇಳಿದೆ.

**ರಾಜಸ್ವ ವೆಚ್ಚ ಹೆಚ್ಚಳಕ್ಕೂ ಕಾರಣ:** ರಾಜ್ಯ ಸರ್ಕಾರದ ರಾಜಸ್ವ ವೆಚ್ಚವೂ ಏರಿಕೆ ಹಾದಿಯಲ್ಲಿದೆ. 2026-27ನೇ ಸಾಲಿನಲ್ಲಿ ₹3.38 ಲಕ್ಷ ಕೋಟಿ ಇರುವ ರಾಜಸ್ವ ವೆಚ್ಚವು, 2029-30ನೇ ಸಾಲಿನ ಅಂತ್ಯದ ಹೊತ್ತಿಗೆ ₹4.23 ಲಕ್ಷ ಕೋಟಿಗೆ ತಲುಪಲಿದೆ.

ಬದ್ಧವೆಚ್ಚದಲ್ಲಿನ ಏರಿಕೆಯೇ ರಾಜಸ್ವ ವೆಚ್ಚದ ಹೆಚ್ಚಳಕ್ಕೆ ಪ್ರಮುಖ ಕಾರಣ. ಇದರ ಜತೆಯಲ್ಲಿ ಸಾಮಾಜಿಕ ಭದ್ರತೆ ಪಿಂಚಣಿ-ಸಹಾಯಧನದಲ್ಲಿನ ಏರಿಕೆಯೂ ಕಾರಣ ಎಂಬುದನ್ನು ಮುನ್ನಂದಾಜಿನಲ್ಲಿನ ದತ್ತಾಂಶಗಳು ಬೊಟ್ಟು ಮಾಡುತ್ತವೆ.

### ರಾಜಸ್ವ ವೆಚ್ಚ ವಿವರ

(ಕೋಟಿಗಳಲ್ಲಿ)




### ಗ್ಯಾರಂಟಿ ಯೋಜನೆಗಳ ಮರುವಿನ್ಯಾಸ

ಗ್ಯಾರಂಟಿ ಕಾರ್ಯಕ್ರಮಗಳಂತಹ ಸಹಾಯಧನ ಮತ್ತು ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳನ್ನು ಮರುವಿನ್ಯಾಸ ಮಾಡಬೇಕು ಎಂಬ ಸಲಹೆಯನ್ನು ಮಧ್ಯಮಾವಧಿ ವಿತ್ತೀಯ ಮುನ್ನಂದಾಜು ನೀಡಿದೆ.

ಹಿಂದುಳಿದ ಮತ್ತು ಅಂಚಿನ ಸಮುದಾಯಗಳಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಅತ್ಯಂತ ಅಗತ್ಯವಾದರೂ, ವಿವೇಚನೆಯಿಂದ ಅವುಗಳನ್ನು ವಿತರಣೆ ಮಾಡಬೇಕು. ಸಹಾಯಧನಗಳನ್ನು ನಿಯಮಿತವಾಗಿ ಪರಿಶೀಲಿಸದೇ ಇದ್ದರೆ, ವಿತ್ತೀಯ ಅವಕಾಶಗಳನ್ನು ಅದು ಸಂಕುಚಿತಗೊಳಿಸುತ್ತದೆ. ಹೀಗಾಗಿ ದೀರ್ಘಾವಧಿಯಲ್ಲಿ ಸುಸ್ಥಿರ ಹಣಕಾಸು ಸ್ಥಿತಿ ಕಾಯ್ದುಕೊಳ್ಳುವಂತೆ ಸಹಾಯಧನ ಯೋಜನೆಗಳನ್ನು ಮರುವಿನ್ಯಾಸ ಮಾಡಬೇಕು ಎಂದು ಮುನ್ನಂದಾಜು ಒತ್ತಿ ಹೇಳಿದೆ.

ಚುನಾವಣಾ ಸಂದರ್ಭದಲ್ಲಿ ಇಂತಹ ಹೊಸ ಯೋಜನೆಗಳನ್ನು ಘೋಷಿಸಿದರೆ, ರಾಜ್ಯದ ಆರ್ಥಿಕ ಸ್ಥಿತಿ ಮತ್ತು ಆರ್ಥಿಕ ಶಿಸ್ತು ಕಾಯ್ದುಕೊಳ್ಳುವುದು ಸವಾಲಾಗಬಹುದು ಎಂದು ಮುನ್ನಂದಾಜು ಹೇಳಿದೆ.

Publication Date
12/03/2026


## ❖ 'ಹೊರ್ಮುಜ್ ಮುಚ್ಚಿದರೆ ಏಷ್ಯಾ ದೇಶಗಳಿಗೇ ಹೆಚ್ಚು ಹೊಡೆತ'

**ಸಂದರ್ಭ: 'ಒಂದುವೇಳೆ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಆಹಾರ ಪದಾರ್ಥಗಳು, ಜೀವನ ನಿರ್ವಹಣಾ ವೆಚ್ಚವು ಏರಿಕೆಯಾಗಲಿದೆ. ಜೊತೆಗೆ, ಇಂಧನ ಪೂರೈಕೆಗೆ ಸಂಬಂಧಿಸಿ ಏಷ್ಯಾದ ದೇಶಗಳೇ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗುತ್ತವೆ' ಎಂದು ವ್ಯಾಪಾರಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ ಅಂಗಸಂಸ್ಥೆಯುಎನ್‌ಸಿಟಿಎಡಿ ಎಚ್ಚರಿಕೆ ನೀಡಿದೆ.**

- ಜಲಸಂಧಿ ಮುಚ್ಚುವುದರಿಂದ ಜಗತ್ತಿನ ವ್ಯಾಪಾರ ಮತ್ತು ಅಭಿವೃದ್ಧಿಯ ಮೇಲಾಗುವ ಪರಿಣಾಮಗಳ ಕುರಿತು ಯುಎನ್‌ಸಿಟಿಎಡಿ ಮಂಗಳವಾರ ವರದಿ ಬಿಡುಗಡೆ ಮಾಡಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ವಕ್ತಾರ ಸ್ಟೀಫನ್ ಡುಜಾರಿಕ್ ಅವರು ಇದೇದಿನ ಮಾಧ್ಯಮಗೋಷ್ಠಿ ನಡೆಸಿ ವರದಿಯನ್ನು ವಿವರಿಸಿದರು.
- "ಪರಿಣಾಮಗಳು ದೀರ್ಘಾವಧಿಯದ್ದಾಗಿರುತ್ತವೆ. ತೈಲಬೆಲೆ ಏರಿಕೆಯಾದರೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುತ್ತದೆ. ಅಡುಗೆ ಅನಿಲ ಬೆಲೆ ಏರಿಕೆಯಾದರೆ, ರಸಗೊಬ್ಬರಗಳ ಬೆಲೆಯೂ ಏರಿಕೆಯಾಗುತ್ತದೆ' ಎಂದು ಹೇಳಿದರು.

- ಏಷ್ಯಾದ ದೇಶಗಳು ಮಾತ್ರವಲ್ಲ, ಇಡೀ ಜಗತ್ತಿನ ಪೂರೈಕೆ ಸರಪಳಿ ಮೇಲೆಯೇ ತೀವ್ರ ಪರಿಣಾಮ ಉಂಟಾಗಲಿದೆ. ಸರಕು ಸಾಗಾಟದರ. ಹಡಗಿನಲ್ಲಿ ಬಳಸುವ ಇಂಧನ ಮತ್ತು ವಿಮೆ ಕಂತುಗಳು ಅಲ್ಲದೆ ಇಂಧನ, ರಸಗೊಬ್ಬರ ಮತ್ತು ಸಂಚಾರದ ವೆಚ್ಚ ಏರಿಯಾದರೆ, ಜನರ ಜೀವನ ನಿರ್ವಹಣಾ ವೆಚ್ಚ ಅಧಿಕವಾಗಲಿದೆ. ಇದರಿಂದ ಸಮಾಜದ ದುರ್ಬಲ ಜನರು ಹೆಚ್ಚು ಸಂಕಷ್ಟಕ್ಕೆ ಒಳಗಾಗುತ್ತಾರೆ' ಎಂದರು.

IAS/KAS Academy



## ❖ ಯುದ್ಧಾಂತ್ಯಕ್ಕೆ ಇರಾನ್ ಮೂರು ಷರತ್ತು

**ಸಂದರ್ಭ: ಪಶ್ಚಿಮ ಏಷ್ಯಾದಲ್ಲಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಸತತ 13ನೇ ದಿನವೂ ಮುಂದುವರಿದಿದ್ದು, ಅಮೆರಿಕದ ತೈಲ ಟ್ಯಾಂಕರ್ ಹಡಗಿನ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ನಾವಿಕರೊಬ್ಬರು ಮೃತಪಟ್ಟಿದ್ದಾರೆ.**



**ಇರಾನ್ ವಿರುದ್ಧ ವಿಶ್ವಸಂಸ್ಥೆಯಲ್ಲಿ ನಿರ್ಣಯ ಅಂಗೀಕಾರ**

ವಿಶ್ವಸಂಸ್ಥೆ (ಪಿಟಿಐ): ಕೊಲ್ಲಿ ಸಹಕಾರ ಮಂಡಳಿಯ ರಾಷ್ಟ್ರಗಳು ಮತ್ತು ಜೋರ್ಡನ್ ಮೇಲೆ ಇರಾನ್ ನಡೆಸಿದ ಭೀಕರ ದಾಳಿಗಳನ್ನು ಖಂಡಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಜತೆಗೂಡಿ ಬಹರೇನ್ ನಿರ್ಣಯ ಮಂಡಿಸಿದೆ. ಇರಾನ್ ತಕ್ಷಣವೇ ತನ್ನೆಲ್ಲಾ ದಾಳಿಗಳನ್ನು ನಿಲ್ಲಿಸಬೇಕು ಮತ್ತು ಹೊರ್ಮುಜ್ ಜಲಸಂಧಿಯನ್ನು ಮುಚ್ಚುವುದಾಗಿ ಬೆದರಿಕೆ ಒಡ್ಡುವುದನ್ನು ನಿಲ್ಲಿಸಬೇಕು ಎಂದು ನಿರ್ಣಯದಲ್ಲಿ ಪ್ರಮುಖವಾಗಿ ಒತ್ತಾಯಿಸಲಾಗಿದೆ. ಪ್ರಸ್ತುತ ಅಮೆರಿಕ ಅಧ್ಯಕ್ಷತೆಯಲ್ಲಿರುವ 15 ರಾಷ್ಟ್ರಗಳ ಭದ್ರತಾ ಮಂಡಳಿಯು ಬುಧವಾರ ಈ ನಿರ್ಣಯವನ್ನು ಅಂಗೀಕರಿಸಿತು. ನಿರ್ಣಯದ ಪರವಾಗಿ 13 ಮತಗಳು ಬಂದವು. ವಿರುದ್ಧವಾಗಿ ಯಾರೂ ಮತ ಹಾಕಲಿಲ್ಲ. ಚೀನಾ ಮತ್ತು ರಷ್ಯಾ ದೇಶಗಳು ಮತದಾನದಲ್ಲಿ ಭಾಗವಹಿಸದೆ ತಟಸ್ಥವಾಗಿದ್ದವು. 11

**ಒಂದನೇ ಪುಟದಿಂದ...** ಬಹರೇನ್ ನೇತೃತ್ವದ ಈ ನಿರ್ಣಯ ಭಾರತ ಸೇರಿ ಒಟ್ಟು 135 ಅನುಮೋದಕರನ್ನು ಹೊಂದಿತ್ತು. ನಿರ್ಣಯವು ಬಹರೇನ್, ಕುವೈತ್, ಒಮನ್, ಕತಾರ್, ಸೌದಿ ಅರೇಬಿಯಾ, ಯುಎಇ ಮತ್ತು ಜೋರ್ಡಾನ್‌ಗಳ ಪ್ರಾದೇಶಿಕ ಸಮಗ್ರತೆ, ಸಾರ್ವಭೌಮತ್ವ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕೆ ತನ್ನ ಬೆಂಬಲವನ್ನು ಪುನರುಚ್ಚರಿಸಿತು.

**ಅನ್ಯಾಯ ಮತ್ತು ಕಾನೂನುಬಾಹಿರ: ಇರಾನ್**

ಇರಾನ್ ವಿರುದ್ಧ ಭದ್ರತಾ ಮಂಡಳಿ ಮಂಡಿಸಿದ ಕ್ರಮವನ್ನು ಇರಾನ್ ವಿರೋಧಿಸಿದೆ. ವಿಶ್ವಸಂಸ್ಥೆಗೆ ಇರಾನ್‌ನ ಕಾಯಂ ಪ್ರತಿನಿಧಿ ಅಮೀರ್ ಸಯೀದ್ ಅವರು, 'ನಿರ್ಣಯವು ವಿಶ್ವಸಂಸ್ಥೆಯ ಸನ್ನದು ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಹೊಂದಿಕೆ ಆಗುವುದಿಲ್ಲ' ಎಂದು ಹೇಳಿದ್ದಾರೆ.

'ಯಾವುದೇ ತಪ್ಪು ಮಾಡಬೇಡಿ. ಇಂದು ಇರಾನ್, ನಾಳೆ ಈ ಸ್ಥಾನದಲ್ಲಿ ಬೇರೆ ಯಾವುದೆ ಸಾರ್ವಭೌಮ ರಾಷ್ಟ್ರ ಇರಲಿದೆ' ಎಂದು ಅವರು ಎಚ್ಚರಿಸಿದ್ದಾರೆ.

- ಸಂಘರ್ಷದಿಂದ ಜಾಗತಿಕ ಇಂಧನ ಕೊರತೆ ಮತ್ತು ವಾಣಿಜ್ಯ ಹಡಗುಗಳ ಸಂಚಾರಕ್ಕೆ ತೀವ್ರ ತೊಂದರೆ ಆಗಿರುವುದರಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಂಘರ್ಷ ಶಮನಕ್ಕೆ ಒತ್ತಡಗಳು ಹೆಚ್ಚಾಗುತ್ತಿವೆ. ಇದರ ಬೆನ್ನಲ್ಲೇ ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಯುದ್ಧವನ್ನು ಕೊನೆಗೊಳಿಸಲು ಇರಾನ್ ಮೂರು ಷರತ್ತುಗಳನ್ನು ವಿಧಿಸಿದೆ.
- 'ಯುದ್ಧ ಕೊನೆಗೊಳಿಸಲು ತೆಗೆದುಕೊಳ್ಳುವ ಯಾವುದೇ ನಿರ್ಣಯವು ಇರಾನಿನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು, ಭವಿಷ್ಯದಲ್ಲಿ ಇರಾನ್ ಮೇಲೆ ಯಾವುದೇ ದಾಳಿ ನಡೆಸುವುದಿಲ್ಲ ಎಂಬುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖಾತರಿಪಡಿಸಬೇಕು.ಅಲ್ಲದೆ, ಇರಾನ್ ಗೆ ಆದ ಹಾನಿಗಳಿಗೆ ಸೂಕ್ತ ಪರಿಹಾರವನ್ನೂ ಕೊಡಬೇಕು' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.
- 'ಈ ಕುರಿತು ರಷ್ಯಾ ಮತ್ತು ಪಾಕಿಸ್ತಾನದ ನಾಯಕರ ಜತೆಗೆ ಮಾತುಕತೆ ನಡೆಸಿದ್ದೇನೆ. ಶಾಂತಿಗಾಗಿ ಇರಾನ್‌ನ ಬದ್ಧತೆಯನ್ನು ಈ ಸಂದರ್ಭದಲ್ಲಿ ನಾನು ಪುನರುಚ್ಚರಿಸಿದ್ದೇನೆ' ಎಂದು ಅವರು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.
- 'ಇಸ್ರೇಲ್ ಮತ್ತು ಅಮೆರಿಕ ಆರಂಭಿಸಿದ ಈ ಯುದ್ಧವನ್ನು ಕೊನೆಗೊಳಿಸಲು ಇರುವ ಏಕೈಕ ಮಾರ್ಗ ಎಂದರೆ ಈ ಮೂರೂ ಷರತ್ತುಗಳಿಗೆ ಸಮ್ಮತಿ ಸೂಚಿಸಿ, ಬದ್ಧತೆ ತೋರುವುದಾಗಿದೆ' ಎಂದು ಅವರು ಬರೆದುಕೊಂಡಿದ್ದಾರೆ.
- 'ಒಂದು ವೇಳೆ ಅಮೆರಿಕವು ಇರಾನ್‌ನ ಬಂದರು ಸೌಲಭ್ಯಗಳ ಮೇಲೆ ದಾಳಿ ಮಾಡಿದರೆ, ಪರ್ಷಿಯನ್ ಕೊಲ್ಲಿಯಲ್ಲಿನ ಬಂದರು, ಆರ್ಥಿಕ ಕೇಂದ್ರ ಅಥವಾ ತಾಣಗಳನ್ನು ಇರಾನ್ ಸಹಜವಾಗಿಯೇ ಗುರಿಯಾಗಿಸಲಿದೆ' ಎಂದು ಇರಾನ್ನ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್‌ಫಜಲ್ ಶೇಖರ್ಚಿ ಅವರು ಇರಾನ್ ಸರ್ಕಾರಿ ವಾಹಿನಿ ಮೂಲಕ ಎಚ್ಚರಿಕೆ ನೀಡಿದರು. ಇದಾದ ಕೆಲವೇ ಹೊತ್ತಿನಲ್ಲಿ ಇರಾನ್ ಅಧ್ಯಕ್ಷರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಮೂರು ಷರತ್ತುಗಳ ಮೂಲಕ ಕದನ ವಿರಾಮ ಕುರಿತು ಪ್ರಸ್ತಾಪಿಸಿದ್ದಾರೆ.
- ಭಾರತೀಯ ನಾವಿಕ ಸಾವು: ಮಾರ್ಷಲ್ ದ್ವೀಪಗಳ ಧ್ವಜದ ಅಡಿಯಲ್ಲಿ ಪ್ರಯಾಣಿಸುತ್ತಿದ್ದ ಅಮೆರಿಕ ಒಡೆತನದ ತೈಲ ಟ್ಯಾಂಕರ್ 'ಸೇಫ್‌ಸೀ ವಿಷ್ಣು' ಹಡಗಿನ ಮೇಲೆ ಇರಾಕ್ ಬಸ್ರಾ ಸಮೀಪ ಇರಾನ್ ದಾಳಿ ನಡೆಸಿದ್ದು, ಭಾರತೀಯ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಈ ಸುದ್ದಿಯನ್ನು ಇರಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ದೃಢಪಡಿಸಿದೆ. ಅಲ್ಲದೆ ಹಡಗಿನಲ್ಲಿದ್ದ ಇತರ 15 ಭಾರತೀಯ ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದೆ.
- ಹಡಗಿನ 27 ಸಿಬ್ಬಂದಿಯನ್ನು ರಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಪರ್ಷಿಯನ್ ಕೊಲ್ಲಿಯಾದ್ಯಂತ ಕೆಲ ದಿನಗಳಿಂದ ಇರಾನ್ ಸೇನೆಯು ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿರುವುದರಿಂದ ನೌಕಾ ಸಿಬ್ಬಂದಿಯ ಸಾವು ನೋವು ಹೆಚ್ಚಾಗುತ್ತಿದೆ.
- ಭಾರತಕ್ಕೆ ಸರಕು ಸಾಮಗ್ರಿಗಳನ್ನು ಹೊತ್ತು ತರುತ್ತಿದ್ದ ಥಾಯ್ಲೆಂಡ್ ಮಯೂರಿ ನಾರಿ' ಹೆಸರಿನ ಹಡಗಿನ ಮೇಲೆ ಇರಾನ್ ಬುಧವಾರ ನಡೆಸಿದ್ದ ದಾಳಿಯಲ್ಲಿ ಇಬ್ಬರು ಭಾರತೀಯ ನಾವಿಕರು ಮೃತಪಟ್ಟಿದ್ದರು. ಇದೀಗ ಇನ್ನೊಂದು ದಾಳಿಯಲ್ಲಿ ಮತ್ತೊಬ್ಬರು ಮೃತಪಟ್ಟಿದ್ದಾರೆ. ವಿಶ್ವದಾದ್ಯಂತ ಹಡಗುಗಳಲ್ಲಿ ಶೇ

Dr. Rajkumar IAS Academy

15ಕ್ಕಿಂತ ಹೆಚ್ಚು ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ ಇರಾನ್ ಯಾವುದೇ ಹಡಗನ್ನು ಗುರಿಯಾಗಿಸಿ ದಾಳಿ ನಡೆಸಿದರೂ ಅದು ಭಾರತೀಯ ಪ್ರಜೆಗಳನ್ನು ಹಾನಿಗೊಳಿಸುತ್ತದೆ ಎಂದು ಮೂಲಗಳು ಕಳವಳ ವ್ಯಕ್ತಪಡಿಸಿವೆ.

## ❖ 'ಕೆನೆಪದರ: ಆದಾಯವಷ್ಟೇ ಆಧಾರವಲ್ಲ': ಒಬಿಸಿ ಮೀಸಲಾತಿ ಕುರಿತು 'ಸುಪ್ರೀಂ' ಮಹತ್ವದ ತೀರ್ಪು

**ಸಂದರ್ಭ: ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ಅಭ್ಯರ್ಥಿಯೊಬ್ಬರು ಕೆನೆಪದರದ ವ್ಯಾಪ್ತಿಯಲ್ಲಿ ಬರುತ್ತಾರೋ ಅಥವಾ ಇಲ್ಲವೋ ಎನ್ನುವುದನ್ನು ಆ ಅಭ್ಯರ್ಥಿಯ ಪೋಷಕರ ಆದಾಯವೊಂದನ್ನೇ ಆಧರಿಸಿ ನಿರ್ಧರಿಸಲು ಸಾಧ್ಯವಿಲ್ಲ. ಪೋಷಕರು ಯಾವ ಹುದ್ದೆಯಲ್ಲಿದ್ದಾರೆ ಎನ್ನುವುದೂ ಮುಖ್ಯವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.**

- ಪೋಷಕರು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ನೌಕರಿಯಲ್ಲಿದ್ದಾರೆ. ಬ್ಯಾಂಕುಗಳು ಅಥವಾ ಖಾಸಗಿ ವಲಯದ ಉದ್ಯೋಗದಲ್ಲಿದ್ದಾರೆ ಎನ್ನುವ ಕಾರಣಕ್ಕೆ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಯುಪಿಎಸ್‌ಸಿ ಆಕಾಂಕ್ಷಿಗಳನ್ನು ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ಕೆನೆಪದರಕ್ಕೆ ಸೇರಿಸಿ ನೇಮಕಾತಿಯಲ್ಲಿ ಮೀಸಲಾತಿ ನಿರಾಕರಿಸಿತ್ತು.



### ಪೀಠ ಹೇಳಿದ್ದು...

- ಸರ್ಕಾರಿ ಉದ್ಯೋಗದಲ್ಲಿ ಸಿಗುವ ಬಡ್ತಿ ಅದರಿಂದ ಏರಿಕೆಯಾಗುವ ಸಂಬಳವು ಜೀವನಮಟ್ಟವನ್ನು ಸುಧಾರಿಸುತ್ತದೆಯಷ್ಟೆ. ಮಂಡಲ್ ಆಯೋಗದ ವರದಿಗೆ ಸಂಬಂಧಿಸಿದ ಇಂದ್ರಾ ಸಾಹ್ನಿ ಪ್ರಕರಣದ ತೀರ್ಪಿನ ಸಾಂವಿಧಾನಿಕವಾದ ಉದ್ದೇಶವನ್ನೇ ಬುಡಮೇಲು ಮಾಡುವಂತೆ ಸಂಬಳದಿಂದ ಬರುವ ಆದಾಯವೊಂದನ್ನೇ ಕೆನೆಪದರಕ್ಕೆ ಆಧಾರವಾಗಿ ಇಟ್ಟುಕೊಳ್ಳಬಾರದು
- ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿ ಇರುವವರನ್ನು ಮತ್ತು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಉದ್ಯೋಗದಲ್ಲಿ ಇರುವವರನ್ನು ಸರ್ಕಾರಿ ನೌಕರರಿಗೆ ಹೋಲಿಸಿ ನೋಡುವುದು ತಾರತಮ್ಯವಾಗುತ್ತದೆ. ಈ ಮೂಲಕ ಅವರ ಮಕ್ಕಳಿಗೆ ಮೀಸಲಾತಿ ನೀಡಬೇಕೆ ಬೇಡವೇ ಎನ್ನುವುದನ್ನು ನಿರ್ಧರಿಸುವುದು ನ್ಯಾಯಯುತವಲ್ಲ
- ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿ ಸೌಲಭ್ಯವನ್ನು ಇದೇ ಸಮುದಾಯದ ಸಾಮಾಜಿಕವಾಗಿ ಮೇಲುಸ್ತರದಲ್ಲಿದ್ದವರು ಬಳಸಿಕೊಳ್ಳ-ಬಾರದು ಎನ್ನುವ ಉದ್ದೇಶದಿಂದ ಕೆನೆಪದರವನ್ನು ಸೃಷ್ಟಿಸಲಾಗಿದೆ. ಒಂದೇ ಸಮುದಾಯದ ಸಮಾನ ಸ್ಥಾನಮಾನಗಳನ್ನು ಹೊಂದಿದ ಜನರ ಮಧ್ಯೆ ಕೃತಕವಾದ ತಾರತಮ್ಯವನ್ನು ಸೃಷ್ಟಿಸಲು ಕೆನೆಪದರವನ್ನು ಸೃಷ್ಟಿಸಲಾಗಿಲ್ಲ

ಜಾತಿಯು, ಸಮುದಾಯಗಳು ಎದುರಿಸಿದ ಐತಿಹಾಸಿಕ ಅನನುಕೂಲಗಳ ಸೂಚಕವಾಗಿರಬಹುದು. ಆದರೆ, ಸಮುದಾಯಗಳ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಏಕಮಾತ್ರ ಅಂಶವಲ್ಲ. ಹಿಂದುಳಿದ ವರ್ಗದವರನ್ನು ಕೆನೆಪದರದಿಂದ ಹೊರಗಿಡುವುದು ಎನ್ನುವುದು ಕೇವಲ ನೀತಿಯ ವಿಚಾರವಲ್ಲ. ನಿಜ ಅರ್ಥದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿಯ ಸೌಲಭ್ಯಗಳು ತಲುಪಲು ಬೇಕಾದ ಸಾಂವಿಧಾನಿಕ ಅಗತ್ಯ

**ಸುಪ್ರೀಂ ಕೋರ್ಟ್ ಪೀಠ**

- ಇದನ್ನು ಪ್ರಶ್ನಿಸಿ ಆಕಾಂಕ್ಷಿಗಳು ದೆಹಲಿ, ಮದ್ರಾಸ್ ಮತ್ತು ಕೇರಳ ಹೈಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿದ್ದರು. ಈ ನ್ಯಾಯಾಲಯಗಳಲ್ಲಿ ಆಕಾಂಕ್ಷಿಗಳ ಪರವಾಗಿ ತೀರ್ಪು ಬಂದಿತ್ತು. ಈ ತೀರ್ಪುಗಳನ್ನು ಪ್ರಶ್ನಿಸಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಆರ್ ಮಹಾದೇವನ್ ಅವರ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸಿ, ಕೇಂದ್ರದ ಮೇಲ್ಮನವಿಯನ್ನು ವಜಾ ಮಾಡಿ ಮಾರ್ಚ್ 11ರಂದು ತೀರ್ಪು ನೀಡಿದೆ.
- 1993ರ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯದ ಟಿಪ್ಪಣಿಯನ್ನು (ಒಬಿಸಿಗಳಿಗೆ ಮೀಸಲಾತಿ ನೀಡುವ ಬಗ್ಗೆ ಇದ್ದ ಟಿಪ್ಪಣಿ) ಓದಿದರೂ 2004ರ ಅಕ್ಟೋಬರ್ 14ರಂದು ಇದೇ ಸಚಿವಾಲಯ ನೀಡಿದ ಸ್ಪಷ್ಟೀಕರಣ ಪತ್ರವನ್ನು ಓದಿದರೂ ಸಂಬಳದಿಂದ ಬರುವ ಆದಾಯವನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಯೊಬ್ಬರನ್ನು ಕೆನೆಪದರದಲ್ಲಿ ಇರಿಸುವುದು ಅಥವಾ ಹೊರಗಿಡುವುದನ್ನು ನಿರ್ಧರಿಸಲು ಸಾಧ್ಯವಿಲ್ಲ' ಎಂದು ಪೀಠ ಸ್ಪಷ್ಟ ಮಾತುಗಳಲ್ಲಿ ಹೇಳಿತು.
- 'ಅಭ್ಯರ್ಥಿಯ ಪೋಷಕರ ಸ್ಥಾನಮಾನಗಳು ಮತ್ತು ಅವರು ಯಾವ ಹುದ್ದೆಯಲ್ಲಿದ್ದಾರೆ ಎನ್ನುವುದೂ ಮುಖ್ಯವಾಗುತ್ತವೆ ಕೆನೆಪದರವನ್ನು ಆದಾಯದ ಆಧಾರದಲ್ಲಿ ಅಲ್ಲ ಸ್ಥಾನಮಾನದ ಆಧಾರದಲ್ಲಿ ನಿರ್ಧರಿಸಬೇಕಾಗುತ್ತದೆ ಎಂಬುದಾಗಿ ಸಚಿವಾಲಯದ ಟಿಪ್ಪಣಿಯ ಒಂದನೇ ಮತ್ತು ಮೂರನೇ ವಿಭಾಗದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

# ಮರ್ಯಾದೆಗೇಡು ಹತ್ಯೆ ತಡೆಗೆ ಮಸೂದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಾತಿ ಮೀರಿ ಪ್ರೀತಿಸುವ, ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಮಸೂದೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ಮರ್ಯಾದೆಗೇಡು ಹತ್ಯೆ' ಹೆಸರಿನಲ್ಲಿ ನಡೆದ ಕೊಲೆ, ದೌರ್ಜನ್ಯಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇಂತಹ ಕೃತ್ಯಗಳ ತಡೆಗೆ ಕಠಿಣ ಕಾನೂನು ತರಬೇಕೆಂದು ನಾಗರಿಕರು, ವಿವಿಧ ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ಕಾಯ್ದೆ ರೂಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು.

ಸಂಪುಟ ಸಭೆ ಅನುಮೋದನೆ ನೀಡಿದ ಮಸೂದೆಯನ್ನು ಇದೇ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

## ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ

ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕಿನಲ್ಲಿರುವ ಸೂರ್ಯನಗರ ಬಡಾವಣೆಯಲ್ಲಿ ₹800 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಕ್ರೀಡಾಂಗಣವು ಆಧುನಿಕ ಸೌಲಭ್ಯಗಳನ್ನು ಹೊಂದಿರಲಿದೆ. ಇದು 80 ಸಾವಿರ ಆಸನಗಳ ಸಾಮರ್ಥ್ಯವನ್ನು ಹೊಂದಿರಲಿದೆ ಎಂದು ಮೂಲಗಳು ತಿಳಿಸಿವೆ.

## ಇತರ ಪ್ರಮುಖ ತೀರ್ಮಾನಗಳು

- 76 ಮೌಲಾನಾ ಆಜಾದ್ ಆಂಗ್ಲ ಮಾದರಿ ಶಾಲೆಗಳು ಮತ್ತು 41 ಉರ್ದು ಮಾಧ್ಯಮ ಶಾಲೆಗಳನ್ನು ₹683.33 ಕೋಟಿ ವೆಚ್ಚದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಣ
- ಮಾಧ್ಯಮಕ್ಕೆ ಸಂಬಂಧಿಸಿದ ನೂತನ ಜಾಹೀರಾತು ನೀತಿಗೆ ಅನುಮೋದನೆ
- 15 ನೇ ಹಣಕಾಸು ಆಯೋಗದ ಅನುದಾನದಡಿ 27 ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ₹17.55 ಕೋಟಿ ವೆಚ್ಚದಲ್ಲಿ ನಿರ್ಮಾಣ
- ಖೇಲೋ ಇಂಡಿಯಾ ಯೋಜನೆಯಡಿ ಮಂಡ್ಯ ಜಿಲ್ಲೆಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ₹14 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಷೇರು ಬಂಡವಾಳವನ್ನು ₹95 ಕೋಟಿಯಿಂದ ₹125 ಕೋಟಿಗೆ ಹೆಚ್ಚಿಸಲು ಅನುಮೋದನೆ



- ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5000 ಟನ್ ಕಬ್ಬು ನುರಿಸಲು ಹೊಸ ಯಂತ್ರೋಪಕರಣ ಅಳವಡಿಕೆಗೆ ₹60 ಕೋಟಿ
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ₹10.83 ಕೋಟಿ
- ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾವೇರಿ ಶಾಖಾ ನಾಲೆ, ಕೆರಗೋಡು ಶಾಖಾ ನಾಲೆ, ಶಿಂಷಾ ನಾಲೆ ಮತ್ತು ಹೊಸ ಮದ್ದೂರು ಶಾಖಾ ನಾಲೆಗಳಡಿ ವಿತರಣಾ ನಾಲೆ ಮತ್ತು ಪಿಕಪ್ ನಾಲೆಗಳ ಆಧುನೀಕರಣಕ್ಕೆ ₹100 ಕೋಟಿ

Dr. Rajkumar IAS/KAS Academy

# ದಯಾಮರಣಕ್ಕೆ ಕಾನೂನು ಬಲ



**ಹರೀಶ್ ರಾಣಾ** ಎನ್ನುವ 31 ವರ್ಷದ ಯುವಕನಿಗೆ ಸುಪ್ರೀಂ ಕೋರ್ಟ್ ದಯಾಮರಣಕ್ಕೆ ಅನುಮತಿ ನೀಡಿದೆ. ಪರೋಕ್ಷ ದಯಾಮರಣವನ್ನು ಕಾನೂನುಬದ್ಧಗೊಳಿಸಿದ ನಂತರ ನ್ಯಾಯಾಲಯವು ಅನುಮತಿ ನೀಡಿದ ಮೊದಲ ಪ್ರಕರಣ ಇದಾಗಿದೆ. ವೈದ್ಯಕೀಯ ಚಿಕಿತ್ಸೆ ದುಬಾರಿಯಾಗಿರುವ, ಬಡವರ ಸಂಖ್ಯೆ ಹೆಚ್ಚಿರುವ ಭಾರತದಲ್ಲಿ ದಯಾಮರಣಕ್ಕೆ ಅವಕಾಶ ನೀಡುವುದು ಯಾವ ರೀತಿಯ ಪರಿಣಾಮಗಳಿಗೆ ಎಡೆಮಾಡಿಕೊಡಬಹುದು ಎನ್ನುವ ಬಗ್ಗೆ ಭಿನ್ನ ಅಭಿಪ್ರಾಯಗಳಿವೆ

ಪ್ರಜಾವಾಣಿ ವಾರ್ತೆ

ಹರೀಶ್ ರಾಣಾ, ತುಂಬು ಜೀವಂತಿಕೆಯ, ಸ್ಫುರದ್ರೂಪಿ ತರುಣ. ಆಟೋಟಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುತ್ತಿದ್ದ ಅವರು, ಉತ್ತಮ ಫುಟ್‌ಬಾಲ್ ಆಟಗಾರನಾಗಿದ್ದರು. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದ ರಾಣಾ, 2013ರ ಒಂದು ದಿನ ಮೊಹಾಲಿಯಲ್ಲಿನ ಪಿ.ಜಿ.ಯ ನಾಲ್ಕನೇ ಮಹಡಿಯಿಂದ ಆಕಸ್ಮಿಕವಾಗಿ ಜಾರಿ ಬಿದ್ದರು. ಪರಿಣಾಮವಾಗಿ, ತಲೆಗೆ ತೀವ್ರ ಪೆಟ್ಟು ಬಿದ್ದು, ಕೋಮಾಕ್ಕೆ ಜಾರಿದರು. ನೆನಪು, ಪ್ರಜ್ಞೆ ಯಾವುದೂ ಇಲ್ಲದೆ, ನಿಶ್ಚೇಷ್ಟಿತರಾಗಿ ದಶಕಕ್ಕೂ ಹೆಚ್ಚು ಕಾಲ ಹಾಸಿಗೆಯಲ್ಲಿಯೇ ಜೀವಚ್ಛವದಂತೆ ಇರುವ ಅವರ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಈಗ ಅನುಮತಿ ನೀಡಿದೆ. ಇದು ಭಾರತದ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಒಂದು ಮೈಲಿಗಲ್ಲಾಗಿದೆ.

ಘನತೆಯಿಂದ ಸಾಯುವುದು ಕೂಡ ಸಂವಿಧಾನದ ಮೂಲಭೂತ ಹಕ್ಕು ಎಂದು 2018ರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಪರೋಕ್ಷ ದಯಾಮರಣಕ್ಕೆ ಮಾರ್ಗಸೂಚಿಗಳನ್ನೂ ರೂಪಿಸಿತ್ತು. ಅವುಗಳನ್ನು 2023ರಲ್ಲಿ ಮಾರ್ಪಡಿಸಲಾಗಿತ್ತು. ಈ ಮಾರ್ಗಸೂಚಿ ರೂಪಿಸಿದ ನಂತರ ಅದರ ಅನ್ವಯ ದೇಶದಲ್ಲಿ ದಯಾಮರಣಕ್ಕೆ ಅವಕಾಶ ನೀಡಿದ ಮೊದಲ ಪ್ರಕರಣ ಹರೀಶ್ ರಾಣಾ ಅವರದ್ದಾಗಿದೆ.

ದಯಾಮರಣಕ್ಕೆ ನ್ಯಾಯಾಲಯದ ಅನುಮತಿ ಪಡೆಯಲು ರಾಣಾ ಪೋಷಕರು ಹಲವು ವರ್ಷ ಹೋರಾಡಿದರು. ಗಾಜಿಯಾಬಾದ್‌ನ ಮನೆಯಲ್ಲಿ ಪೋಷಕಾಂಶಯುಕ್ತ ಆಹಾರವನ್ನು ಕೊಳವೆಯ ಮೂಲಕ ನೀಡುತ್ತಾ ಮಗನ ಜೀವ ಕಾಪಾಡುತ್ತಲೇ ಬಂದವರು ಅವರು. ಆದರೆ, ರಸ್ತೆ ಬದಿ ಸ್ಯಾಂಡ್‌ವಿಚ್ ಮಾರಿ ಜೀವನ ನಡೆಸುವ ರಾಣಾ ತಂದೆಗೆ ಮಗನ ಆರೈಕೆಯೇ ಒಂದು ಸವಾಲಾಗಿತ್ತು. ಜತೆಗೆ ದಂಪತಿಗೆ ವಯಸ್ಸಾಗಿದ್ದರಿಂದ ತಮ್ಮ ನಂತರ ಮಗನನ್ನು ನೋಡಿಕೊಳ್ಳುವವರು ಯಾರು ಎನ್ನುವ ಚಿಂತೆಯೂ ಕಾಡತೊಡಗಿತು. ಈ ದಿಸೆಯಲ್ಲಿ, ತಮ್ಮ ಮಗನಿಗೆ ಘನತೆಯಿಂದ ಸಾಯುವ ಹಕ್ಕನ್ನು ಖಾತ್ರಿಪಡಿಸಿ, ದಯಾಮರಣ ಕಲ್ಪಿಸಬೇಕು ಎಂದು ರಾಣಾ ಪೋಷಕರು 2024ರ ಜುಲೈನಲ್ಲಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದರು. ಆದರೆ, ಆಗ ರಾಣಾಗೆ ವೆಂಟಿಲೇಟರ್ ಅಳವಡಿಸಿರಲಿಲ್ಲ. ಕೃತಕ ಸಾಧನಗಳ ಬೆಂಬಲ ಇಲ್ಲದೇ ಸಹಜವಾಗಿಯೇ ಬದುಕುಳಿದಿರುವ ರಾಣಾ ಪ್ರಕರಣವು ದಯಾಮರಣದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ದೆಹಲಿ ಹೈಕೋರ್ಟ್ ಅರ್ಜಿ ವಜಾ ಮಾಡಿತ್ತು. ಹೈಕೋರ್ಟ್ ಆದೇಶವನ್ನೇ ಎತ್ತಿಹಿಡಿದ ಸುಪ್ರೀಂ ಕೋರ್ಟ್, ದಂಪತಿಗೆ ಅಗತ್ಯ ಆರ್ಥಿಕ ಮತ್ತು ವೈದ್ಯಕೀಯ ನೆರವು ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿತು.

ಆದರೆ, ರಾಣಾ ಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದರಿಂದ ಪೋಷಕರು 2025ರ ನವೆಂಬರ್‌ನಲ್ಲಿ ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು. ರಾಣಾ ಆರೋಗ್ಯದ ಬಗ್ಗೆ ವರದಿ ನೀಡಲು ನ್ಯಾಯಾಲಯವು ಪ್ರಾಥಮಿಕ ವೈದ್ಯಕೀಯ ಮಂಡಳಿ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿಗಳನ್ನು ರಚಿಸಿತ್ತು. ಅವು ನೀಡಿದ ವರದಿಗಳನ್ನು ನ್ಯಾಯಾಲಯವು ಕೂಲಂಕಷವಾಗಿ ಪರಿಶೀಲಿಸಿತು. ರಾಣಾ ಆರೋಗ್ಯ ಸುಧಾರಿಸುವ ಯಾವ ಸಾಧ್ಯತೆಯೂ ಇಲ್ಲ ಎನ್ನುವುದನ್ನು ಅರಿತ ನ್ಯಾಯಾಲಯವು, ಅವರು ಪರೋಕ್ಷ ದಯಾಮರಣಕ್ಕೆ ಅರ್ಹ ಎಂದು ತೀರ್ಪು ನೀಡಿತು. ದಯಾಮರಣದ ಬಗ್ಗೆ ಪ್ರತ್ಯೇಕವಾದ ಸಮಗ್ರ ಕಾಯ್ದೆಯೊಂದನ್ನು ರೂಪಿಸುವಂತೆಯೂ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಹರೀಶ್ ರಾಣಾ ಪ್ರಕರಣವು ದಯಾಮರಣದ ವಿಚಾರದಲ್ಲಿ ಒಂದು ಪ್ರಮುಖ ತಿರುವಾಗಲಿದೆ ಎನ್ನುವ ವಿಶ್ಲೇಷಣೆ ಇದೆ. ಪ್ರಕರಣಗಳಿಗೆ ಅಗತ್ಯವಾದ ವೈದ್ಯಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆಯೂ ಪ್ರಕರಣದ ವಿಚಾರಣೆಯ ವೇಳೆ ಚರ್ಚೆಯಾಗಿದೆ. ಈ ದಿಸೆಯಲ್ಲಿ ದೇಶದ ಕೆಲವು ರಾಜ್ಯಗಳಲ್ಲಿ ಮಾತ್ರ ಅಲ್ಪಸ್ವಲ್ಪ ಕೆಲಸ ಆಗಿದ್ದು, ಉಳಿದ ರಾಜ್ಯಗಳಲ್ಲಿ ಸೂಕ್ತ ವ್ಯವಸ್ಥೆ ರೂಪಿಸಿಲ್ಲ.

ವಾಸಿಯಾಗದ ಕಾಯಿಲೆಯಿಂದ ನರಳುತ್ತಿರುವವರಿಗೆ ಮತ್ತು ಅವರ ಕುಟುಂಬದವರಿಗೆ ದಯಾಮರಣ ಬಿಡುಗಡೆ ನೀಡುತ್ತದೆ ಎನ್ನುವುದು ಕೆಲವರ ವಾದ. ಹೃದಯ ಬಡಿತ ಇದ್ದ ಮಾತ್ರಕ್ಕೆ ವ್ಯಕ್ತಿ ಜೀವಂತ ಇದ್ದ ಹಾಗೆ ಅಲ್ಲ. ಭಾರತದಲ್ಲಿ ವೈದ್ಯಕೀಯ ಚಿಕಿತ್ಸೆ ಅತ್ಯಂತ ದುಬಾರಿಯಾಗಿದ್ದು, ಅನೇಕರ ಜೀವ–ಜೀವನ ಅದರಿಂದ ದುರ್ಭರವಾಗುತ್ತಿದೆ. ದಯಾಮರಣಕ್ಕೆ ಅವಕಾಶ ಇರಬಾರದು ಎಂದರೆ, ಗಂಭೀರ ಕಾಯಿಲೆಗಳಿಂದ ಬದುಕುವ ಸಾಧ್ಯತೆ ಇಲ್ಲದವರಿಗೆ ಉತ್ತಮವಾದ ಚಿಕಿತ್ಸೆಯ ಲಭ್ಯತೆ, ಕೊನೆಯ ದಿನಗಳ ಆರೈಕೆಯ ವ್ಯವಸ್ಥೆಯನ್ನು ಖಾತರಿಪಡಿಸಬೇಕು ಎನ್ನುವ ಒತ್ತಾಯ ಇದೆ.


ಆಧಾರ: ಪಿಟಿಐ, ಜರ್ನಲ್ ಆಫ್ ಪಯನೀರಿಂಗ್ ಮೆಡಿಕಲ್ ಸೈನ್ಸಸ್, ಮಾಧ್ಯಮ ವರದಿಗಳು

## ಕಾನೂನು ಏನು ಹೇಳುತ್ತದೆ?

- ಅಮೆರಿಕ, ಕೆನಡಾ, ನೆದರ್‌ಲೆಂಡ್ಸ್ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ ದಯಾಮರಣಕ್ಕೆ ಸಂಬಂಧಿಸಿದ ಕಾನೂನುಗಳು ಕಠಿಣವಾಗಿಲ್ಲ
- ಆದರೆ, ಭಾರತದ ಕಾನೂನು ಕಠಿಣವಾಗಿದೆ. 2018ರಿಂದ ದೇಶದಲ್ಲಿ ಪರೋಕ್ಷ ದಯಾಮರಣಕ್ಕೆ ಕಾನೂನಿನ ಅಡಿಯಲ್ಲಿ ಹಲವು ಷರತ್ತುಗಳೊಂದಿಗೆ ಅವಕಾಶ ಇದೆ. 2011ರಲ್ಲಿ ಅರುಣಾ ಶಾನ್‌ಭಾಗ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅರುಣಾ ಅವರಿಗೆ ದಯಾಮರಣಕ್ಕೆ ಅವಕಾಶ ನೀಡಿರಲಿಲ್ಲ
- 2018ರಲ್ಲಿ ಕಾಮನ್ ಕಾಸ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಘನತೆಯಿಂದ ಸಾಯುವ ಹಕ್ಕನ್ನೂ ಸಂವಿಧಾನದ 21ನೇ ವಿಧಿ ದೇಶದ ನಾಗರಿಕರಿಗೆ ನೀಡುತ್ತದೆ ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿತು. ಆದರೆ, ನಿರ್ದಿಷ್ಟ ವ್ಯಕ್ತಿಗೆ ದಯಾಮರಣ ಕರುಣಿಸುವುದಕ್ಕೂ ಮೊದಲು ನ್ಯಾಯಾಲಯದ ಒಪ್ಪಿಗೆ ಬೇಕು ಎಂದೂ ಹೇಳಿತು

## ಪ್ರಕ್ರಿಯೆ ಹೇಗೆ?

ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿರುವವರು, ಸಾಯುವ ಸ್ಥಿತಿ ಅಥವಾ ಕೋಮಾದಲ್ಲಿರುವವರು, ಬದುಕುವ ಸಾಧ್ಯತೆಯೇ ಇಲ್ಲದವರು ಮತ್ತು ಜೀವಚ್ಛವದಂತೆ ಬದುಕುತ್ತಿರುವವರಿಗೆ ದಯಾಮರಣಕ್ಕೆ ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಅದು ನ್ಯಾಯಾಲಯದ ಆದೇಶದ ಮೂಲಕ ಮಾತ್ರವೇ ಜಾರಿಯಾಗಬೇಕು. ಅದಕ್ಕೆ ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ನ್ಯಾಯಾಲಯವು ನಿರ್ದಿಷ್ಟ ಪ್ರಕರಣದಲ್ಲಿ ದಯಾಮರಣಕ್ಕೆ ಅನುಮತಿ ನೀಡುವ ಸಂಬಂಧ ವೈದ್ಯಕೀಯ ತಜ್ಞರಿರುವ ಪ್ರಾಥಮಿಕ ವೈದ್ಯಕೀಯ ಮಂಡಳಿ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿಗಳನ್ನು ನೇಮಿಸುತ್ತದೆ. ಅವು ನೀಡಿದ ವರದಿಯ ಆಧಾರದಲ್ಲಿ ನ್ಯಾಯಾಲಯವು ತೀರ್ಮಾನ ಕೈಗೊಳ್ಳುತ್ತದೆ.



## ನೇರ ದಯಾಮರಣ, ಪರೋಕ್ಷ ದಯಾಮರಣ

ಜಗತ್ತಿನ ಹಲವು ರಾಷ್ಟ್ರಗಳಲ್ಲಿ ನೇರ ದಯಾಮರಣ (ವಿಷದ ಚುಚ್ಚುಮದ್ದು ಚುಚ್ಚುವುದು) ಮತ್ತು ಪರೋಕ್ಷ ದಯಾಮರಣ (ಜೀವ ಹಿಡಿದಿಡುವ ಸಾಧನ/ಚಿಕಿತ್ಸೆ ನಿಲ್ಲಿಸುವುದು) ವಿಧಾನಗಳು ಚಾಲ್ತಿಯಲ್ಲಿವೆ. ಆದರೆ, ಭಾರತದಲ್ಲಿ ಉದ್ದೇಶಪೂರ್ವಕವಾಗಿ ಪ್ರಾಣ ತೆಗೆಯುವುದು ಅಪರಾಧ ಎನ್ನಿಸಿಕೊಳ್ಳುವುದರಿಂದ ನೇರ ದಯಾಮರಣಕ್ಕೆ ಅವಕಾಶವಿಲ್ಲ. ಆದಾಗ್ಯೂ, ಜೀವರಕ್ಷಕ ಸಾಧನ ತೆಗೆಯುವುದು, ಚಿಕಿತ್ಸೆ ನಿಲ್ಲಿಸುವುದು ಕೂಡ ಒಂದು ಬಗೆಯ ನೇರ ದಯಾಮರಣವೇ ಎನ್ನುವ ವಾದ ಇದೆ. ಭಾರತದಲ್ಲಿ ಬಡವರ ಸಂಖ್ಯೆ ಹೆಚ್ಚಿದ್ದು, ದೇಶದಲ್ಲಿ ದಯಾಮರಣಕ್ಕೆ ಅವಕಾಶ ನೀಡಿದರೆ, ದುರುಪಯೋಗ ಆಗುವ ಸಾಧ್ಯತೆಗಳು ಹೆಚ್ಚಿವೆ ಎನ್ನುವುದು ಹಲವರ ವಾದ.

## ದಯಾಮರಣಕ್ಕೆ ಅವಕಾಶ ಸಿಕ್ಕ ಹಾದಿ

- ದೇಶದಲ್ಲಿ ದಯಾಮರಣಕ್ಕೆ ಸಂಬಂಧಿಸಿದ ಮೊದಲ ಪ್ರಮುಖ ನಿರ್ಧಾರ ಬಂದಿದ್ದು 1987ಲ್ಲಿ. ಮಾರುತಿ ಶ್ರೀಪತಿ ಮತ್ತು ಮಹಾರಾಷ್ಟ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 309 ಅನ್ನು ವಿಶ್ಲೇಷಿಸಿತು. ಈ ಸೆಕ್ಷನ್ ಪ್ರಕಾರ, ಆತ್ಮಹತ್ಯೆಗೆ ಯತ್ನಿಸುವುದು ಅಪರಾಧ. ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಸಾಯುವ ಹಕ್ಕು ಕೂಡ ಬದುಕುವ ಹಕ್ಕಿನ ಭಾಗ. ಹಾಗಾಗಿ ಐಪಿಸಿ ಸೆಕ್ಷನ್ 309 ಅಸಾಂವಿಧಾನಿಕ ಎಂದು ಹೇಳಿತ್ತು. ಗಂಭೀರ ಅನಾರೋಗ್ಯದಿಂದ ಬಳಲುತ್ತಿರುವವರು ಅಥವಾ ತಡೆಯಲು ಸಾಧ್ಯವಾಗದಷ್ಟು ನೋವನ್ನು ಉಂಡವರಿಗೆ ತಮ್ಮ ಬದುಕನ್ನು ಕೊನೆಗೊಳಿಸಲು ಅವಕಾಶ ನೀಡಬೇಕು ಎಂದು ಬಾಂಬೆ ಹೈಕೋರ್ಟ್ ಹೇಳಿತ್ತು
- ಈ ಅಭಿಪ್ರಾಯಕ್ಕೆ ವಿರುದ್ಧವಾದ ನಿಲುವನ್ನು ಸುಪ್ರೀಂ ಕೋರ್ಟ್ 1996ರಲ್ಲಿ ವ್ಯಕ್ತಪಡಿಸಿತ್ತು. ಜ್ಞಾನ್ ಕೌರ್ ಮತ್ತು ಪಂಜಾಬ್ ಸರ್ಕಾರದ ನಡುವಿನ ಪ್ರಕರಣದಲ್ಲಿ ಅರ್ಜಿದಾರರು, ಬೇರೊಬ್ಬರು ಆತ್ಮಹತ್ಯೆ ಮಾಡಿಕೊಳ್ಳಲು ನೆರವು ನೀಡಿದ್ದ ಪ್ರಕರಣದಲ್ಲಿ ತಮಗೆ ಐಪಿಸಿಯ 306 ಸೆಕ್ಷನ್ ಅಡಿಯಲ್ಲಿ ಶಿಕ್ಷೆಯಾಗಿದ್ದನ್ನು ಪ್ರಶ್ನಿಸಿದ್ದರು. ಸಾಯುವ ಹಕ್ಕು ಮೂಲಭೂತ ಹಕ್ಕು ಆಗಿರುವುದರಿಂದ, ಆ ಹಕ್ಕನ್ನು ಚಲಾಯಿಸಲು ಬೇರೆಯವರಿಗೆ ಸಹಾಯ ಮಾಡುವುದು ಅಪರಾಧ ಕೃತ್ಯ ಆಗುವುದಿಲ್ಲ ಎಂದು ಅರ್ಜಿದಾರರು ವಾದಿಸಿದ್ದರು. ಆದರೆ, ಈ ವಾದವನ್ನು ಒಪ್ಪದಿದ್ದ ಸುಪ್ರೀಂ ಕೋರ್ಟ್, ಬದುಕುವ ಹಕ್ಕು, ಸಾಯುವ ಹಕ್ಕನ್ನು ನೀಡುವುದಿಲ್ಲ ಎಂದು ಪ್ರತಿಪಾದಿಸಿತ್ತು. ಮಾರುತಿ ಶ್ರೀಪತಿ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್‌ನ ಪ್ರತಿಪಾದನೆಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡರೂ, ಐಪಿಸಿ ಸೆಕ್ಷನ್ 309 ಸಂವಿಧಾನಬದ್ಧ ಎಂದು ಹೇಳಿತ್ತು



- ದಯಾಮರಣದ ಬಗ್ಗೆ ಮಹತ್ವದ ಕಾನೂನು ಚರ್ಚೆ ನಡೆದಿದ್ದು ಅರುಣಾ ಶಾನ್‌ಭಾಗ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ. ಆಸ್ಪತ್ರೆಯ ನೌಕರನಿಂದಲೇ ಅತ್ಯಾಚಾರ ಮತ್ತು ಗಂಭೀರ ದಾಳಿಗೆ ಒಳಗಾಗಿ 37 ವರ್ಷ ಜೀವಂತ ಶವವಾಗಿ ಮಲಗಿದ್ದ ನರ್ಸ್ ಅರುಣಾ ಶಾನ್‌ಭಾಗ್ ಅವರಿಗೆ ದಯಾಮರಣ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ನ್ಯಾಯಾಲಯ ಇದನ್ನು ತಳ್ಳಿಹಾಕಿತ್ತು. ಆದರೆ, ಕಠಿಣ ನಿಯಮಗಳ ಅಡಿಯಲ್ಲಿ ಪರೋಕ್ಷ ದಯಾಮರಣಕ್ಕೆ ಅವಕಾಶ ಕಲ್ಪಿಸಬಹುದು ಎಂದು ಹೇಳಿತ್ತು. ಅಪರೂಪದ ಪ್ರಕರಣಗಳಲ್ಲಿ ಪರೋಕ್ಷ ದಯಾಮರಣ ನೀಡಬಹುದು. ಆದರೆ, ಯಾವಾಗ ಅವಕಾಶ ಕೊಡಬೇಕು ಎಂಬುದರ ಬಗ್ಗೆ ಹೈಕೋರ್ಟ್‌ನಿಂದ ಅನುಮತಿ ಪಡೆಯಬೇಕು ಎಂದು ಅದು ಹೇಳಿತ್ತು

- ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ 2018ರಲ್ಲಿ ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡಿತ್ತು. ಎನ್‌ಜಿಒ ಕಾಮನ್ ಕಾಸ್ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ, ಪರೋಕ್ಷ ದಯಾಮರಣಕ್ಕೆ ಅನುಮತಿ ನೀಡಿತು ಮತ್ತು ಮರಣ ಇಚ್ಛೆ ಉಯಿಲುಗಳನ್ನು ಪರಿಗಣಿಸಬಹುದು ಎಂದು ಹೇಳಿತ್ತು. ದಯಾಮರಣ ಪ್ರಕ್ರಿಯೆಯನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಸ್ಪಷ್ಟವಾದ ನಿಯಮಗಳನ್ನೂ ಅದು ರೂಪಿಸಿತ್ತು. ಪ್ರಕ್ರಿಯೆ ಮೇಲೆ ನ್ಯಾಯಾಧೀಶರ ಮೇಲ್ವಿಚಾರಣೆ, ವೈದ್ಯಕೀಯ ಮಂಡಳಿಯ ಶಿಫಾರಸುಗಳು ಮತ್ತು ಇನ್ನಿತರ ನಿಯಮಗಳನ್ನೊಳಗೊಂಡ ಮಾರ್ಗಸೂಚಿಯನ್ನು ನ್ಯಾಯಾಲಯ ಪ್ರಕಟಿಸಿತು. ಈ ತೀರ್ಮಾನವು ದಯಾಮರಣಕ್ಕೆ ಸಂಬಂಧಿಸಿದ ಭಾರತದ ಧೋರಣೆಯನ್ನು ಬದಲಿಸಿತು
- 2023ರಲ್ಲಿ ಸುಪ್ರೀಂ ಕೋರ್ಟ್ 2018ರ ಮಾರ್ಗಸೂಚಿಗಳಿಗೆ ತಿದ್ದುಪಡಿ ತಂದು ನಿಯಮಗಳನ್ನು ಮತ್ತಷ್ಟು ಸರಳಗೊಳಿಸಿತು

## ❖ ಮಹಾರಾಷ್ಟ್ರ ಸರ್ಕಾರದ ನಿರ್ಧಾರ: 'ಪ್ರಾಣ ರಕ್ಷಣೆಗಾಗಿ ಚಿರತೆ ಹತ್ಯೆ ಮಾಡಿದರೆ ಕ್ರಮವಿಲ್ಲ'

**ಸಂದರ್ಭ: ಚಿರತೆಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪರಿಚ್ಛೇದ 1ರಿಂದ ತೆಗೆದು ಹಾಕಿ, ಪರಿಚ್ಛೇದ 2ಕ್ಕೆ ಸೇರಿಸುವ ಪ್ರಸ್ತಾವವನ್ನು ಮಹಾರಾಷ್ಟ್ರ ಸಚಿವ ಸಂಪುಟ ಸಭೆ ಅನುಮೋದಿಸಿದೆ.**

- ಪರಿಚ್ಛೇದ 1ರಲ್ಲಿ ಗುರುತಿಸಲಾಗುವ ಪ್ರಾಣಿಗಳನ್ನು ಹತ್ಯೆ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಅದರೆ ಪರಿಚ್ಛೇದ 2ರಲ್ಲಿರುವ ಪ್ರಾಣಿಗಳನ್ನು ತಮ್ಮ ಪ್ರಾಣ ರಕ್ಷಣೆಗಾಗಿ ಹತ್ಯೆ ಮಾಡಿದರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದಿಲ್ಲ.
- 'ಚಿರತೆಗಳು ಜನವಸತಿ ಪ್ರದೇಶಕ್ಕೆ ಪ್ರವೇಶಿಸುವ ಘಟನೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇಂಥ ಸಂದರ್ಭದಲ್ಲಿ ಪ್ರಾಣರಕ್ಷಣೆಗಾಗಿ ಅವುಗಳನ್ನು ಹತ್ಯೆ ಮಾಡಿದರೆ, ಅಂಥವರ ವಿರುದ್ಧದ ಕಾನೂನು ಕ್ರಮವನ್ನು ತಪ್ಪಿಸಲು ಸರ್ಕಾರವು ಈ ನಿರ್ಧಾರ ಕೈಗೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲಾಗುವುದು' ಎಂದು ಅರಣ್ಯ ಸಚಿವ ಗಣೇಶ್ ನಾಯ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

- ಮಾನವ ವಸತಿ ಪ್ರದೇಶಕ್ಕೆ ನುಗ್ಗಿ, ಸಾವು-ನೋವು ಉಂಟುಮಾಡುವ ಮಾಡುವ ಚಿರತೆಗಳನ್ನು ನರಭಕ್ಷಕ' ಎಂದು ಘೋಷಿಸುವಂತೆಯೂ ನಿರ್ದೇಶಿಸಲಾಗಿದೆ ಎಂದರು.
- 150 ಚಿರತೆಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲು ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿತ್ತು. ಪ್ರಾಯೋಗಿಕವಾಗಿ ಹಣ್ಣು ಚಿರತೆಗಳನ್ನು ಸೆರೆ ಹಿಡಿದು ಚಿಕಿತ್ಸೆಗೊಳಪಡಿಸಲು ಕೇಂದ್ರವು ಅನುಮತಿ ನೀಡಿದೆ. ಇದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.
- ಮಾನವ-ಚಿರತೆ ಸಂಘರ್ಷ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಅರಣ್ಯ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಶಾಲೆಗಳ ಸಮಯವನ್ನೂ ಬದಲಾಯಿಸಲಾಗಿದೆ ಎಂದರು.
- ಸೆರೆ ಹಿಡಿಯಲಾದ ಹುಲಿಗಳು, ಚಿರತೆಗಳು ಹಾಗೂ ಇತರ ವನ್ಯಪ್ರಾಣಿಗಳನ್ನು ರಕ್ಷಿಸಿ ಇರಿಸಲಾಗುವ ಸಂರಕ್ಷಣಾ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು ಸೆರೆ ಹಿಡಿದಿರುವ ಚಿರತೆಗಳನ್ನು ಕೇಂದ್ರೀಯ ಮೃಗಾಲಯ ಪ್ರಾಧಿಕಾರದ ಅನುಮತಿ ಪಡೆದು ಹೊರ ರಾಜ್ಯಗಳ ಮೃಗಾಲಯ ಹಾಗೂ ಸಂರಕ್ಷಣಾ ಕೇಂದ್ರಗಳಿಗೆ ಸ್ಥಳಾಂತರಿಸುವುದಕ್ಕೂ ಪ್ರಯತ್ನ ನಡೆದಿದೆ' ಎಂದು ತಿಳಿಸಿದರು.

## ❖ 'ಲಿಂಗತ್ವ ಅಲ್ಪ ಸಂಖ್ಯಾತರಿಂದ ರಕ್ತದಾನ: ನಿಯಮ ಸಡಿಲಿಕೆಯಿಂದ ಹಾನಿ'

**ಸಂದರ್ಭ: ಲಿಂಗತ್ಯ ಅಲ್ಪಸಂಖ್ಯಾತರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಸಲಿಂಗ ಲೈಂಗಿಕ ಒಲವುಳ್ಳ ಪುರುಷರು ರಕ್ತದಾನ ಮಾಡುವುದನ್ನು ನಿರ್ಬಂಧಿಸಿರುವ ನಿಯಮಗಳನ್ನು ಸಡಿಲಗೊಳಿಸಿದರೆ ಅದರಿಂದ ಇತರರಿಗೆ ಹಾನಿಯಾಗುತ್ತದೆ ಎಂದು ತಜ್ಞರು ಅಭಿಪ್ರಾಯ ನೀಡಿದ್ದಾರೆ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ತಿಳಿಸಿದೆ.**

- 2017ರಲ್ಲಿ ರಾಷ್ಟ್ರೀಯ ರಕ್ತ ವರ್ಗವಣಾ ಮಂಡಳಿಯು (ಎನ್‌ಬಿಟಿಸಿ) ಲಿಂಗತ್ವ ಅಲ್ಪ ಸಂಖ್ಯಾತರು, ಲೈಂಗಿಕ ಕಾರ್ಯಕರ್ತೆಯರು ಹಾಗೂ ಸಲಿಂಗ ಲೈಂಗಿಕ ಒಲವುಳ್ಳ ಪುರುಷರು ರಕ್ತದಾನಿಗಳಾಗುವುದನ್ನು ನಿರ್ಬಂಧಿಸಿ ಮಾರ್ಗಸೂಚಿಗಳನ್ನು ಬಿಡುಗಡೆ ಗೊಳಿಸಿತ್ತು ಈ ಮಾರ್ಗಸೂಚಿಗಳು ತಾರತಮ್ಯ ಎಸಗುತ್ತಿವೆ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳು ಸಲ್ಲಿಕೆ ಯಾಗಿವೆ.
- ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠವು ಈ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿದೆ. ಕಳೆದ ಮೇ ನಲ್ಲಿ ನಡೆದ ವಿಚಾರಣೆ ವೇಳೆ ಮಾರ್ಗಸೂಚಿಗಳ ಸರಳೀಕರಣ ಕುರಿತು ತಜ್ಞರ ಅಭಿಪ್ರಾಯ ಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಪೀಠ ಸೂಚಿಸಿತ್ತು.
- ಅದರಂತೆ ಕೇಂದ್ರ ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು, 'ತಜ್ಞರು ನಿಯಮಗಳ ಸಡಿಲೀಕರಣದ ವಿರುದ್ಧ ಅಭಿಪ್ರಾಯ ನೀಡಿದ್ದಾರೆ' ಎಂದು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

## ❖ ಬೇಸಿಗೆ ಅವಧಿಯ ದ್ವಿತೀಯಾರ್ಧದಲ್ಲಿ ಬೀಳುವ ಮಳೆ: ಹವಾಮಾನ ತಜ್ಞರ ವಿಶ್ಲೇಷಣೆ: ಮುಂಗಾರು ಮೇಲೆ ಎಲ್‌ನಿನೊ ಪರಿಣಾಮ

**ಸಂದರ್ಭ: ಈ ಬಾರಿ ಬೇಸಿಗೆ ಅವಧಿಯ ದ್ವಿತೀಯಾರ್ಧದಲ್ಲಿ ಬೀಳುವ ಮಳೆ ಮೇಲೆ ಎಲ್ ನಿನೊ ಪರಿಣಾಮ ಬೀರಲಿದೆ. ಇದು ಮುಂದಿನ ವರ್ಷದ ಮುಂಗಾರಿನ ಮೇಲೂ ಪರಿಣಾಮ ಬೀರುವ ಸಾಧ್ಯತೆಯೂ ಹೆಚ್ಚು ಎಂದು ಹವಾಮಾನತಜ್ಞರು ಹೇಳಿದ್ದಾರೆ.**

- 'ಎಲ್ ನಿನೊ ಬೀರುವ ಪರಿಣಾಮ ಸಾಧಾರಣ ಅಥವಾ ಪ್ರಬಲವಾಗಿರಬಹುದು, ಆದರೆ, ಪೆಸಿಫಿಕ್ ಸಾಗರದಲ್ಲಿ ಉಷ್ಣತೆಯಲ್ಲಿ ಕಂಡುಬರುವ ಹೆಚ್ಚಳವು 'ಸೂಪರ್ ಎಲ್‌ನೊ' ಆಗಿ ಪರಿವರ್ತನೆಗೊಳ್ಳಲಿದೆಯೇ ಎಂಬುದನ್ನು ಈಗಲೇ ಅಂದಾಜಿಸಲಾಗದು' ಎಂದೂ ಹೇಳಿದ್ದಾರೆ.

- 'ಆಗಸ್ಟ್ ವೇಳೆಗೆ ಎಲ್‌ನೊ ಪರಿಣಾಮ ಸಾಧಾರಣ ಇರುವ ಸಾಧ್ಯತೆ ಶೇಕಡ 98ರಷ್ಟು ಹಾಗೂ ಪ್ರಬಲವಾಗಿರುವ ಸಾಧ್ಯತೆ ಶೇ 80ರಷ್ಟು ಇರಲಿದೆ. ಸೂಪರ್ ಎಲ್ ನಿನೊ ಆಗಿ ಪರಿವರ್ತನೆಯಾಗುವ ಸಾಧ್ಯತೆ ಶೇ 22ರಷ್ಟು' ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಹೇಳಿದೆ.
- 'ಸೂಪರ್ ಎಲ್ ನಿನೊ ಪರಿಣಾಮದ ಬಗ್ಗೆ ಸ್ಪಷ್ಟ ಚಿತ್ರಣವು ಮೇ ಅಂತ್ಯದ ವೇಳೆಗೆ ಸಿಗಲಿದೆ' ಎಂದು ಐಎಂಡಿ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.
- ಎಲ್‌ನಿನೊ ಎಂದರೆ ಸಮುದ್ರದ ಉಷ್ಣತೆ ಹೆಚ್ಚಾಗುವುದು. ಲಾನಿನಾ ಎಂದರೆ ಸಮುದ್ರದ ಉಷ್ಣತೆ ಕಡಿಮೆ ಆಗುವುದು. ಎಲ್ ನಿನೊ ಎಂದರೆ ಮಳೆ ಕಡಿಮೆ, ಲಾನಿನಾ ಎಂದರೆ ಮಳೆ ಹೆಚ್ಚು ಬರುವುದು. ಇವೆರಡೂ ಭಾರತದ ಮುಂಗಾರಿನ ಮೇಲೆ ಪರಿಣಾಮ ಬೀರುವಂತಹ ಬೆಳವಣಿಗೆಗಳು.
- ಎಲ್ ನಿನೋವನ್ನು ಆಧರಿಸಿ ಭಾರತದ ಮಳೆಯ ಪರಿಸ್ಥಿತಿಯನ್ನು ಮೂರು ತಿಂಗಳ ಮುಂಚೆ ಹೇಳಬಹುದು.

## ❖ ಭಾರತ ಸೇರಿ 16 ದೇಶಗಳ ಮೇಲೆ ಕ್ರಮ: ಹೊಸ ಆಮದು ಸುಂಕ ವಿಧಿಸಲು ಮುಂದಾದ ಅಮೆರಿಕ

**ಸಂದರ್ಭ: ಭಾರತ ಸೇರಿ ಒಟ್ಟು 16 ದೇಶಗಳ ಮೇಲೆ ಹೊಸ ರೀತಿಯ ಆಮದು ಸುಂಕ ವಿಧಿಸಲು ಅಮೆರಿಕ ಮುಂದಾಗಿದೆ.**

- 'ನಮ್ಮೊಂದಿಗೆ ವ್ಯಾಪಾರ ನಡೆಸುವ ದೇಶಗಳು, ನಮಗೆ ರಫ್ತು ಮಾಡುವ ಉದ್ದೇಶದಿಂದಲೇ ಅಧಿಕ ಪ್ರಮಾಣದಲ್ಲಿ ಸರಕು ತಯಾರಿಸುತ್ತಿವೆ. ಇದರಿಂದ ನಮ್ಮ ದೇಶದ ತಯಾರಿಕಾ ಕ್ಷೇತ್ರದ ಸಾಮರ್ಥ್ಯವು ಕುಗ್ಗಿದೆ. ಆದ್ದರಿಂದ ಈ ಬಗ್ಗೆ ತನಿಖೆ ನಡೆಸಲು ಮುಂದಾಗಿದ್ದೇವೆ' ಎಂದು ಅಮೆರಿಕ ಹೇಳಿದೆ. ಈ ಬಗ್ಗೆ ಇಲ್ಲಿನ ವ್ಯಾಪಾರ ಪ್ರತಿನಿಧಿಗಳ ಇಲಾಖೆಯು ಬುಧವಾರ ಹೇಳಿಕೆ ಬಿಡುಗಡೆ ಮಾಡಿದೆ.
- ಚೀನಾ, ಐರೋಪ್ಯ ಒಕ್ಕೂಟ, ಸಿಂಗಪುರ, ಸ್ವಿಟ್ಜರ್ಲೆಂಡ್, ನಾರ್ವೆ, ಇಂಡೊನೇಷ್ಯಾ, ಮಲೇಷ್ಯಾ, ಕಾಂಬೋಡಿಯಾ, ಥಾಯ್ಲೆಂಡ್, ಕೊರಿಯಾ, ವಿಯೆಟ್ನಾಂ, ತೈವಾನ್, ಬಾಂಗ್ಲಾದೇಶ, ಮೆಕ್ಸಿಕೊ, ಜಪಾನ್ ಮತ್ತು ಭಾರತವನ್ನು ಗುರಿಯಾಗಿಸಿ ತನಿಖೆ ನಡೆಯಲಿದೆ.
- '1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 301 (ಬಿ) ಅನ್ವಯ ತನಿಖೆ ನಡೆಸಲಾಗುವುದು. ನಮಗೆ ಹೆಚ್ಚಿನ ಪ್ರಮಾಣದ ರಫ್ತು ಮಾಡಬೇಕೆಂಬ ದೃಷ್ಟಿಯಿಂದ ರೂಪಿಸಿಕೊಂಡ ವಿದೇಶಿ ಸರ್ಕಾರಗಳ ನೀತಿಗಳ ಬಗ್ಗೆ, ತನಿಖೆ ನಡೆಸಲಾಗುವುದು. ಇಂಥ ನೀತಿಗಳು ಅಮೆರಿಕದ ವ್ಯಾಪಾರದ ಕುರಿತಾಗಿ ತಾರತಮ್ಯದ ಧೋರಣೆ ಹೊಂದಿವೆ ಮತ್ತು ನಮಗೆ ಹೊರೆಯಾಗಿವೆ' ಎಂದು ಇಲಾಖೆ ಹೇಳಿದೆ.

# ಚಿಲ್ಲರೆ ಹಣದುಬ್ಬರ ಏರಿಕೆ

## ಆಹಾರ ಪದಾರ್ಥಗಳ ಬೆಲೆ ಏರಿಕೆ ಹಣದುಬ್ಬರ ಹೆಚ್ಚಳಕ್ಕೆ ಕಾರಣ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಫೆಬ್ರುವರಿ ತಿಂಗಳಿನಲ್ಲಿ ಶೇ 3.21ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಗುರುವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಜನವರಿಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 2.74ರಷ್ಟಿತ್ತು. ಆಹಾರ ಪದಾರ್ಥಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರದ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು ಎಂಬುದು ಕೇಂದ್ರ ಸರ್ಕಾರವು ಆರ್‌ಬಿಐಗೆ ನಿಗದಿ ಮಾಡಿರುವ ಗುರಿ. ಜನವರಿಯಿಂದ ಚಿಲ್ಲರೆ ಹಣದುಬ್ಬರ ಅಳೆಯಲು 2024ನೇ ಇಸವಿಯನ್ನು ಮೂಲ ವರ್ಷವನ್ನಾಗಿ ಇರಿಸಿಕೊಳ್ಳಲಾಗಿದೆ.

ಜನವರಿಯಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆ ಪ್ರಮಾಣ ಶೇ 2.13ರಷ್ಟಿತ್ತು. ಅದು ಫೆಬ್ರುವರಿಯಲ್ಲಿ ಶೇ 3.47ಕ್ಕೆ ಹೆಚ್ಚಳವಾಗಿದೆ.

ಚಿನ್ನ, ಬೆಳ್ಳಿ, ವಜ್ರ, ಪ್ಲಾಟಿನಂ ಆಭರಣಗಳು, ಕೊಬ್ಬರಿ, ಟೊಮೆಟೊ ಮತ್ತು ಹೂಕೋಸು ಬೆಲೆಯಲ್ಲಿ ಏರಿಕೆಯಾಗಿದೆ. ಬೆಳ್ಳುಳ್ಳಿ, ಈರುಳ್ಳಿ, ಆಲೂಗೆಡ್ಡೆ, ಲಿಚಿ ಹಣ್ಣು ಬೆಲೆಯಲ್ಲಿ ಇಳಿಕೆಯಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ



**ಕಚ್ಚಾ ತೈಲದ ಬೆಲೆಯಲ್ಲಿನ ಶೇ 10ರಷ್ಟು ಹೆಚ್ಚಳದಿಂದ, ಚಿಲ್ಲರೆ ಹಣದುಬ್ಬರವು ಶೇ 0.40ರಿಂದ ಶೇ 0.60ರಷ್ಟು ಏರಿಕೆ ಆಗಲಿದೆ**
**ಐಸಿಆರ್‌ಎ**

ಚಿಲ್ಲರೆ ಹಣದುಬ್ಬರವು ಕ್ರಮವಾಗಿ ಶೇ 3.37ರಷ್ಟು ಮತ್ತು ಶೇ 3.02ರಷ್ಟಿದೆ. ತೆಲಂಗಾಣದಲ್ಲಿ ಹಣದುಬ್ಬರ ಅತಿ ಹೆಚ್ಚು (ಶೇ 5.02ರಷ್ಟು) ಆಗಿದೆ, ಮಿಜೋರಾಂನಲ್ಲಿ ಅತಿ ಕಡಿಮೆ (ಶೇ 0.1ರಷ್ಟು) ಇದೆ ಎಂದು ತಿಳಿಸಿದೆ.

'ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟು ದೀರ್ಘಾವಧಿಗೆ ಮುಂದುವರಿದರೆ ಹಣದುಬ್ಬರದ ಮೇಲೆ ಪರಿಣಾಮ ಉಂಟಾಗಬಹುದು' ಎಂದು ಐಸಿಆರ್‌ಎನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್

**ಮುಖ್ಯಾಂಶಗಳು**

- ಫೆಬ್ರುವರಿಯಲ್ಲಿ ಆರ್‌ಬಿಐನ ಮಿತಿಯಲ್ಲೇ ಚಿಲ್ಲರೆ ಹಣದುಬ್ಬರ
- ಪಶ್ಚಿಮ ಏಷ್ಯಾದ ಬಿಕ್ಕಟ್ಟು ಹಣದುಬ್ಬರದ ಮೇಲೆ ಪರಿಣಾಮ
- ತೆಲಂಗಾಣದಲ್ಲಿ ಹಣದುಬ್ಬರ ಅತಿ ಹೆಚ್ಚು ದಾಖಲು

ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತತೆಯಿಂದ ಮುಂದಿನ ಬಾರಿ ರೆಪೊ ದರ ವಿಚಾರದಲ್ಲಿ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ತಟಸ್ಥ ನಿಲುವು ಅನುಸ-ರಿಸಬಹುದು ಎಂದು ಹೇಳಿದ್ದಾರೆ. ಏಪ್ರಿಲ್ 6ರಿಂದ 8ರವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆ ನಡೆಯಲಿದೆ.

'ಆಹಾರೇತರ ಪದಾರ್ಥಗಳು, ಇಂಧನ, ಲೋಹದ ಬೆಲೆ ಹೆಚ್ಚಳ ಸಹ ಹಣದುಬ್ಬರ ಏರಿಕೆಗೆ ಕಾರಣವಾಗಿವೆ' ಎಂದು ನೈಟ್ ಫ್ರಾಂಕ್ ಇಂಡಿಯಾದ ಸಂಶೋಧನಾ ವಿಭಾಗದ ರಾಷ್ಟ್ರೀಯ ನಿರ್ದೇಶಕ ವಿವೇಕ್ ರಥಿ ಹೇಳಿದ್ದಾರೆ.

## ಗಿಲ್‌ಗೆ ವರ್ಷದ ಕ್ರಿಕೆಟಿಗ ಪ್ರಶಸ್ತಿ: 15ರಂದು ಪ್ರದಾನ

# ದ್ರಾವಿಡ್‌ಗೆ ಜೀವಮಾನ ಸಾಧನೆ ಗೌರವ



ರಾಹುಲ್ ದ್ರಾವಿಡ್



ಶುಭಮನ್ ಗಿಲ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಗೌರವ ಪ್ರದಾನ ಮಾಡಲಿದೆ.

ಇದೇ 15ರಂದು ಇಲ್ಲಿ ನಡೆಯಲಿರುವ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಹುಲ್ ಅವರನ್ನು ಗೌರವಿಸಲಾಗುವುದು. ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡಗಳ ನಾಯಕ ಶುಭಮನ್ ಗಿಲ್ ಅವರೂ ವರ್ಷದ ಕ್ರಿಕೆಟಿಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಭಾರತ ತಂಡವು 2024ರ ಟಿ20 ವಿಶ್ವಕಪ್ ಜಯಿಸಿದ್ದ ಸಂದರ್ಭದಲ್ಲಿ ರಾಹುಲ್ ಮುಖ್ಯ ಕೋಚ್ ಆಗಿದ್ದರು. ಕರ್ನಾಟಕದ ರಾಹುಲ್ ಅವರು ತಮ್ಮ ವೃತ್ತಿಜೀವನದಲ್ಲಿ ಭಾರತದ ಕ್ರಿಕೆಟ್ ಬೆಳವಣಿಗೆಗೆ ನೀಡಿರುವ ಕಾಣಿಕೆಗಳನ್ನು ಪರಿಗಣಿಸಿ ಬಿಸಿಸಿಐನ ಅತ್ಯುನ್ನತ ಗೌರವವನ್ನು ಪ್ರದಾನ ಮಾಡಲಾಗುತ್ತಿದೆ.

ಅವರು ಕೆಲವು ವರ್ಷಗಳ ಹಿಂದೆ ಜೂನಿಯರ್ ತಂಡಗಳ ಕೋಚ್ ಆಗಿದ್ದ ಸಂದರ್ಭದಲ್ಲಿ ಭಾರತ 19 ವರ್ಷದೊಳಗಿನವರ ತಂಡವು ವಿಶ್ವಕಪ್ ಜಯಿಸಿತ್ತು.

26 ವರ್ಷದ ಗಿಲ್ ಅವರು ಈಚೆಗೆ ನಡೆದ ಟಿ20 ವಿಶ್ವಕಪ್ ಟೂರ್ನಿಯ ತಂಡಕ್ಕೆ ಆಯ್ಕೆಯಾಗಿರಲಿಲ್ಲ. ಆದರೆ ಇನ್ನುಳಿದ ಎರಡೂ ಮಾದರಿಗಳಲ್ಲಿ ಅವರ ಸಾಧನೆಯನ್ನು ಪರಿಗಣಿಸಿ ಈ ಗೌರವ ನೀಡಲಾಗುತ್ತಿದೆ.

ಹೋದ ವರ್ಷದಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 983 ರನ್ ಪೇರಿಸಿದ್ದಾರೆ. ಅದರಲ್ಲೂ ಇಂಗ್ಲೆಂಡ್ ಎದುರು ನಡೆದಿದ್ದ ಟೆಸ್ಟ್ ಸರಣಿಯಲ್ಲಿ 754 ರನ್ ಗಳಿಸಿದ್ದರು. ಸುಮಾರು 70ರ ಸರಾಸರಿಯಲ್ಲಿ ಈ ರನ್‌ಗಳನ್ನು ಗಳಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಅವರು ಒಟ್ಟು 490 ರನ್ ಗಳಿಸಿದ್ದಾರೆ. ಅದರಲ್ಲಿ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸಿದ ತಂಡದಲ್ಲಿದ್ದ ಅವರು 188 ರನ್ ಗಳಿಸಿದ್ದರು. ಎರಡೂ ಮಾದರಿ ಸೇರಿ 49ರ ಸರಾಸರಿಯಲ್ಲಿ ಒಟ್ಟು 1764 ರನ್ ಗಳಿಸಿದ್ದಾರೆ. ಅದರಲ್ಲಿ ಏಳು ಶತಕ ಮತ್ತು ಮೂರು ಅರ್ಧಶತಕಗಳು ಇವೆ. ಆದರೆ ಅವರು ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಉತ್ತಮ ಫಾರ್ಮ್‌ನಲ್ಲಿ ಇರಲಿಲ್ಲ. ಹೋದ ಸಲದ ಐಪಿಎಲ್‌ನಲ್ಲಿ ಅವರು ಗುಜರಾತ್ ಟೈಟನ್ಸ್ ತಂಡದಲ್ಲಿ ಆಡಿ, 650 ರನ್ ಗಳಿಸಿದ್ದರು.

ದೇಶಿ ಕ್ರಿಕೆಟ್‌ನ 'ಉತ್ತಮ ಸಂಘಟನೆ' ಗೌರವಕ್ಕೆ ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಭಾಜನವಾಗಿದೆ.

# ಸುಮಿತ್‌ಗೆ ಜಾವೆಲಿನ್ ಚಿನ್ನ




ಭಾರತದ ಜಾವೆಲಿನ್ ಥ್ರೋಪಟು ಸುಮಿತ್ ಆಂಟಿಲ್ —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪ್ಯಾರಾಲಿಂಪಿಕ್ ಡಬಲ್ ಚಿನ್ನ ವಿಜೇತ ಜಾವೆಲಿನ್ ಥ್ರೋಪಟು ಸುಮಿತ್ ಆಂಟಿಲ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಟೋಕಿಯೊ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಚಿನ್ನದ ಪದಕಗಳನ್ನು ಗೆದ್ದಿರುವ ಭಾರತದ ಸುಮಿತ್ ಅವರು ಗುರುವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ (ಎಫ್43/ಎಫ್44/ಎಫ್64) ಸ್ಪರ್ಧೆಯಲ್ಲಿ 69.25 ಮೀಟರ್ ಸಾಧನೆಯೊಂದಿಗೆ ಅಗ್ರಸ್ಥಾನಿಯಾದರು.

ಪುಷ್ಪೇಂದ್ರ ಸಿಂಗ್ ಅವರು ಈಟಿಯನ್ನು 56.91 ಮೀಟರ್ ದೂರ ಎಸೆಯುವ ಮೂಲಕ ಬೆಳ್ಳಿ ಪದಕ ಗೆದ್ದರೆ, ಪೂನಂ ರಾಮ್ (49.48 ಮೀ) ಕಂಚಿನ ಪದಕ ಗೆದ್ದರು.

'ವರ್ಷದ ಕೊನೆಯಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಪ್ಯಾರಾ ಕೂಟದತ್ತ ಹೆಚ್ಚಿನ ಗಮನಹರಿಸಿದ್ದು, 75 ಮೀಟರ್ ಗಡಿ ದಾಟುವ ಗುರಿ ಹೊಂದಿದ್ದೇನೆ' ಎಂದು ಸುಮಿತ್ ಹೇಳಿದರು.

ಪುರುಷರ 400 ಮೀಟರ್ ಟಿ13 ಸ್ಪರ್ಧೆಯಲ್ಲೂ ಭಾರತ ಪ್ರಾಬಲ್ಯ ಸಾಧಿಸಿತು. ಸುಬೋಧ್ ಭಟ್ 51.88 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರೆ, ಪ್ರಿಯಾಂಶು ಕೌಶಿಕ್ (53.19 ಸೆ) ಮತ್ತು ಅವನಿಲ್ ಕುಮಾರ್ (56.91 ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಮುತ್ತಿಕ್ಕಿದರು.

400 ಮೀಟರ್ ಟಿ53/ಟಿ54 ಸ್ಪರ್ಧೆಯ ವೀಲ್‌ಚೇರ್ ವಿಭಾಗದಲ್ಲೂ ಆತಿಥೇಯ ತಂಡವು ತನ್ನ ಪ್ರಾಬಲ್ಯ ಮುಂದುವರಿಸಿತು. ಮನೋಜ್‌ಕುಮಾರ್ 54.33 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಅನಿಲ್ ಕುಮಾರ್ (57.57 ಸೆ) ಮತ್ತು ಮಣಿಕಂಠನ್ ಜ್ಯೋತಿ (1 ನಿ.01.94ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ಪುರುಷರ ಲಾಂಗ್ ಜಂಪ್ ಟಿ42/ಟಿ63 ಸ್ಪರ್ಧೆಯಲ್ಲೂ ಭಾರತ ಮೂರೂ ಪದಕ ಗೆದ್ದುಕೊಂಡಿತು. ಶಾಲಿಯೇಶ್ ಕುಮಾರ್ 5.47 ಮೀಟರ್ ಜಿಗಿತದೊಂದಿಗೆ ಚಿನ್ನದ ಸಾಧನೆ ಮಾಡಿದರು.

## ❖ ಜಾಹೀರಾತಿನ ಶುಲ್ಕಕ್ಕೆ ತೆರಿಗೆ: ಮಸೂದೆ ಮಂಡನೆ

**ಸಂದರ್ಭ: ಪುರಸಭೆ ಮತ್ತು ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಜಾಹೀರಾತುಗಳ ಶುಲ್ಕದ ಮೇಲೆ ತೆರಿಗೆ ವಿಧಿಸುವ ಉದ್ದೇಶಕ್ಕಾಗಿ ಕರ್ನಾಟಕ ಮುನ್ಸಿಪಾಲಿಟಿ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.**

- ಪುರಸಭೆ ಮತ್ತು ನಗರಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಭೂಮಿ,ಕಟ್ಟಡ, ಗೋಡೆಯ ಅಥವಾ ರಚನೆಯ ಮೇಲೆ ಅಳವಡಿಸುವ ಜಾಹೀರಾತುಗಳಿಗೆ ಶುಲ್ಕದ ಮೇಲೆ ತೆರಿಗೆ ವಿಧಿಸಲಾಗುವುದು. 1 ಚದರ ಮೀಟರ್ ವರೆಗಿನ ಜಾಗಕ್ಕೆ 50. 1 ಚದರ ಮೀಟರ್‌ಗಿಂತ ಹೆಚ್ಚು ಮತ್ತು 2.5 ಚದರ ಮೀಟರ್‌ಗಿಂತ ಜಾಗಕ್ಕೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ 80.
- ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಜಾಗಕ್ಕೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ ₹80 ವಾಹನಗಳ ಮೇಲೆ ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳಿಗೆ 5 ಚದರ ಮೀಟರ್‌ವರೆಗಿನ ಜಾಗಕ್ಕೆ 375,

## ❖ ಚಿನ್ನ ಅಡಮಾನ ಸಾಲ ಪಡೆದ ಗ್ರಾಹಕರ ರಕ್ಷಣೆ: ಖಾಸಗಿ ಮಸೂದೆ

**ಸಂದರ್ಭ: ಚಿನ್ನ ಅಡಮಾನ ಸಾಲ ಪಡೆದ ಗ್ರಾಹಕರ ಹಕ್ಕುಗಳ ರಕ್ಷಣೆಗೆ ಅವಕಾಶ ನೀಡುವ ಖಾಸಗಿ ಮಸೂದೆಯನ್ನು ಕಾಂಗ್ರೆಸ್‌ನ ರಮೇಶ್ ಬಾಬು ಮಂಡಿಸಿದರು.**

- ವಿಧಾನ ಪರಿಷತ್ತಿನ ಕಲಾಪದ ವೇಳೆ ರಮೇಶ್ ಬಾಬು ಅವರು, 'ಕರ್ನಾಟಕ ಚಿನ್ನ ಅಡಮಾನವಿಟ್ಟು ಸಾಲಗಾರರ ರಕ್ಷಣಾ ಮಸೂದೆ' ಮಂಡಿಸಿದರು.
- 'ಚಿನ್ನ ಅಡಮಾನ ಇರಿಸಿಕೊಳ್ಳುವ ಕಂಪನಿಗಳು, ಚಿನ್ನದ ಮಾರುಕಟ್ಟೆ ಮೌಲ್ಯದ ಶೇ 50ರಷ್ಟು ಮೊತ್ತವನ್ನಷ್ಟೇ ಸಾಲವಾಗಿ ನೀಡುತ್ತವೆ ವಿಪರೀತ ದರದ ಬಡ್ಡಿ ವಸೂಲಿ ಮಾಡುತ್ತವೆ. ಅಡಮಾನವಿಡುವ ಚಿನ್ನಕ್ಕೆ ನ್ಯಾಯಯುತವಾದ ಮೊತ್ತ ನೀಡದೆ ಗ್ರಾಹಕರನ್ನು ವಂಚಿಸುತ್ತವೆ. ಚಿನ್ನದ ಮಾರುಕಟ್ಟೆ ಮೌಲ್ಯದ ಕನಿಷ್ಠ ಇಂತಿಷ್ಟು ಪ್ರಮಾಣವನ್ನು ಸಾಲವಾಗಿ ನೀಡಬೇಕು ಎನ್ನುವುದನ್ನು ಕಡ್ಡಾಯ ಮಾಡಬೇಕು' ಎಂದು ಮಸೂದೆಯ ವಿವರಗಳನ್ನು ಸದನದ ಮುಂದೆ ಇರಿಸಿದರು.
- 'ಸಾಲ ನೀಡಿದ ಮೂರೇ ತಿಂಗಳೊಳಗೆ ಬಡ್ಡಿ ಪಾವತಿಸದಿದ್ದರೆ ಚಿನ್ನವನ್ನು ಹರಾಜು ಹಾಕುತ್ತವೆ. ಸಾಲ ಮತ್ತು ಅಸಲನ್ನು ಕಳೆದು ಉಳಿಕೆ ಮೊತ್ತವನ್ನು ಗ್ರಾಹಕರಿಗೆ ನೀಡುವುದಿಲ್ಲ. ಅಲ್ಲದೆ, ಚಿನ್ನ ಬಿಡಿಸಿಕೊಳ್ಳುವವರಿಗೆ ತೂಕದಲ್ಲಿ ಮೋಸ ಮಾಡಲಾಗುತ್ತಿದೆ. ಇದಕ್ಕೆಲ್ಲಾ ಕಡಿವಾಣ ಹಕುವ ಉದ್ದೇಶದಿಂದ ಹರಾಜಿಗೆ ಕಾಲಮಿತಿ, ತೂಕ ವಂಚನೆಗೆ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ವಿವರಿಸಿದರು.
- ಈ ಮಸೂದೆಯ ಮೇಲೆ ಚರ್ಚೆ ನಡೆಸಲು ಮುಂದಿನ ವಾರ ಅವಕಾಶ ನೀಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

## ❖ 50 ವಿಭಾಗ, 150 ಉಪ ವಿಭಾಗ ರಚನೆ

**ಸಂದರ್ಭ: ಐದು ನಗರ ಪಾಲಿಕೆಗಳ ಹೊಸ ವಾರ್ಡ್‌ನಂತೆ ಪುನರ್ ವಿಂಗಡಣೆ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳ ಪುನರ್ ವಿಂಗಡಣೆಯ ಆಧಾರದಲ್ಲಿ 50 ವಿಭಾಗ ಹಾಗೂ 150 ಉಪ ವಿಭಾಗಗಳನ್ನು ರಚಿಸಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಆದೇಶಿಸಿದ್ದಾರೆ.**

- ಬೆಂಗಳೂರು ಕೇಂದ್ರ ನಗರ ಪಾಲಿಕೆ, ಪೂರ್ವ ನಗರ ಪಾಲಿಕೆ, ಪಶ್ಚಿಮ ನಗರ ಪಾಲಿಕೆ, ಉತ್ತರ ನಗರ ಪಾಲಿಕೆ, ದಕ್ಷಿಣ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ವಾರ್ಡ್‌ಗಳ ಪುನರ್ ವಿಂಗಡಣೆಯಾಗಿದೆ. ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ವಿಭಾಗ, ಉಪ ವಿಭಾಗಗಳನ್ನು ರಚಿಸಲಾಗಿದೆ.

Dr. Rajkumar IAS KAS Academy

## ❖ 'ಟ್ರಾನ್ಸ್‌ಜೆಂಡರ್' ತಿದ್ದುಪಡಿ ಮಸೂದೆ ಮಂಡನೆ

**ಸಂದರ್ಭ: ಲಿಂಗತ್ವ ಅಲ್ಪಸಂಖ್ಯಾತರು (ಟ್ರಾನ್ಸ್ ಜೆಂಡರ್) ಪದಕ್ಕೆ ನಿಖರವಾದ ವ್ಯಾಖ್ಯಾನ ಒದಗಿಸಲು ಮತ್ತು ಅಂತಹವರ ಮೇಲೆ ಉಂಟಾಗುವ ಹಾನಿಯ ತೀವ್ರತೆಗೆ ತಕ್ಕಂತೆ ಶಿಕ್ಷಿಸಲು ಪೂರಕವಾದ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು.**

- 'ಟ್ರಾನ್ಸ್ ಜೆಂಡರ್ ವ್ಯಕ್ತಿಗಳು (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆಯನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್ ಪರಿಚಯಿಸಿದರು.
- ಕಾನೂನಿನ ಪ್ರಯೋಜನಗಳನ್ನು ತಲುಪಿಸಲು ಟ್ರಾನ್ಸ್ ಜೆಂಡರ್‌ಗಳ ಸರಿಯಾದ ಗುರುತಿಸುವಿಕೆ ಮತ್ತು ರಕ್ಷಣೆಗೆ ನಿಖರವಾದ ವ್ಯಾಖ್ಯಾನ ಅಗತ್ಯವಿದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಅಗತ್ಯವಿದ್ದರೆ ತಜ್ಞರ ಸಲಹೆ ಪಡೆಯುವ ಆಯ್ಕೆಯನ್ನು ಮಸೂದೆ ಹೊಂದಿದೆ.

## ❖ ಪಕ್ಷದ ಹೆಸರು ಘೋಷಿಸಿದ ಶಶಿಕಲಾ

**ಸಂದರ್ಭ: ಹೊಸ ರಾಜಕೀಯ ಪಕ್ಷ ಸ್ಥಾಪಿಸಿರುವ ವಿ.ಕೆ.ಶಶಿಕಲಾ ಅವರು, ಪಕ್ಷದ ಹೆಸರು 'ಆಲ್ ಇಂಡಿಯಾ ಪುರಚ್ಚಿ ತಲೈವರ್ ಮಕ್ಕಳ್ ಮುನ್ನೇತ್ರ ಕಳಗಂ' (ಎಐಪಿಟಿಎಂಎಂಕೆ) ವಿ.ಕೆ.ಶಶಿಕಲಾ ಘೋಷಿಸಿದ್ದಾರೆ.**

- ತಮಿಳುನಾಡು ಆಡಳಿತಾರೂಢ ಡಿಎಂಕೆ ಪಕ್ಷವು ಮುಂಬರಲಿರುವ ವಿಧಾನಸಭಾ ಚುನಾವಣೆಗಾಗಿ ತನ್ನ ಮಿತ್ರ ಪಕ್ಷ ಕೊಂಗುನಾಡು ಮಕ್ಕಳ ದೇಸಿಯಕಾಚಿಗೆ (ಕೆಎಂಡಿಕೆ)ಎರಡು ಕ್ಷೇತ್ರಗಳನ್ನು ಹಂಚಿಕೆ ಮಾಡಿರುವುದಾಗಿ ಘೋಷಿಸಿದೆ.
- 2021ರ ಚುನಾವಣೆಯಲ್ಲಿ ಕೆಎಂಡಿಕೆ ಅಭ್ಯರ್ಥಿಗಳು ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಪಕ್ಷದ ಕಾರ್ಯದರ್ಶಿ ಇ.ಆರ್.ಈಶ್ವರನ್ ಅವರು ತಿರುಚನಕೋಡೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು.
- ಈವರೆಗೆ ಡಿಎಂಕೆ ಪಕ್ಷವು ತನ್ನ ಮುಖ್ಯ ಮಿತ್ರಪಕ್ಷವಾಗಿರುವ ಕಾಂಗ್ರೆಸ್‌ಗೆ 28 ಕ್ಷೇತ್ರಗಳು, ಎಂಡಿಎಂಕೆಗೆ ನಾಲ್ಕು, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಹಾಗೂ ಎಂಎಂಕೆಗೆ ತಲಾ ಎರಡು ಕ್ಷೇತ್ರಗಳನ್ನು ಹಂಚಿಕೆ ಮಾಡಿದೆ. ಏಪ್ರಿಲ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆಗಳಿದೆ.

## ❖ ಹೆಬ್ಬಕ್ಕ ಪಕ್ಷಿಯ 2 ಮರಿಗಳ ಜನನ

**ಸಂದರ್ಭ: ರಾಜಸ್ಥಾನ ದಲ್ಲಿರುವ ತಳಿ ಸಂವರ್ಧಕ ಕೇಂದ್ರದಲ್ಲಿ 'ಹೆಬ್ಬಕ್ಕ' ಪಕ್ಷಿಯ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಎರಡು ಮರಿಗಳು ಜನಿಸಿವೆ.**

- 'ಅಳಿವಿನಂಚಿನಲ್ಲಿರುವ ಈ ಪಕ್ಷಿಗಳ ಸಂರಕ್ಷಣೆಗಾಗಿ ಸ್ಥಾಪಿಸಿರುವ ಪ್ರಾಜೆಕ್ಟ್ ಗ್ರೇಟ್ ಇಂಡಿಯನ್ ಬಸ್ಟರ್ಡ್ (ಜಿಐಬಿ) ನಾಲ್ಕನೇ ವರ್ಷಕ್ಕೆ ಕಾಲಿಟ್ಟಿದ. ಗ್ರೇಟ್ ಇಂಡಿಯನ್ ಬಸ್ಟರ್ಡ್ ಮರಿಗಳ ಪೈಕಿ ಒಂದು ನೈಸರ್ಗಿಕ ಸಂಯೋಗದಿಂದ ಮತ್ತು ಇನ್ನೊಂದು ಕೃತಕ ಗರ್ಭಧಾರಣೆಯ ಮೂಲಕ ಜನಿಸಿದೆ. ಕೇಂದ್ರದಲ್ಲಿ ಈಗ ಒಟ್ಟು 70 ಪಕ್ಷಿಗಳಿವೆ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು 'ಎಕ್ಸ್'ನಲ್ಲಿ ಶುಕ್ರವಾರ ತಿಳಿಸಿದ್ದಾರೆ.
- 'ಈ ಪ್ರಭೇದದ ಸಂರಕ್ಷಣೆಯ ಪ್ರಯತ್ನಗಳಲ್ಲಿ ಇದು ಪ್ರಮುಖ ಮೈಲಿಗಲ್ಲಾಗಿದೆ. ಈ ವರ್ಷ ಪಳಗಿಸಿದ ಕೆಲ ಮರಿಗಳನ್ನು ಕಾಡಿಗೆ ಹಂತ ಹಂತವಾಗಿ ಬಿಡಲಾಗುವುದು. ಈ ಯೋಜನೆಯ ಪಾಲಿಗೆ ಇದು ಹೊಸ ಸವಾಲಿನ ಆರಂಭವಾಗಿದೆ' ಎಂದು ಹೇಳಿದ್ದಾರೆ.

## ❖ ನ್ಯುಮೋನಿಯಾ ಲಸಿಕೆಗೆ ಒತ್ತಾಯ

**ಸಂದರ್ಭ: ದೇಶದ ಹಿರಿಯ ನಾಗರಿಕರಿಗೆ ನ್ಯುಮೋನಿಯಾ ಲಸಿಕೆ ಹಾಕಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಆಗ್ರಹಿಸಿದರು.**

- ಲೋಕಸಭೆಯಲ್ಲಿ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ದೇಶದಲ್ಲಿ ಶೇ 97ರಷ್ಟು ಮಕ್ಕಳಿಗೆ ಲಸಿಕೆ ಹಾಕಿಸಲಾದೆ ನಮ್ಮ ಜನರ ಜೀವಿತಾವಧಿ ಈಗ 71-72 ವರ್ಷಗಳು, 40 ಲಕ್ಷ ಜನರು ನ್ಯುಮೋನಿಯಾದಿಂದ ನರಳಿದ್ದಾರೆ. ಈ ಕಾಯಿಲೆಯ ಮರಣ ಪ್ರಮಾಣ ಶೇ 17ರಿಂದ ಶೇ 40ರಷ್ಟು ಇದೆ. ಹಿರಿಯ ನಾಗರಿಕರಿಗೆ ಒಂದು ಸಲ ಲಸಿಕೆ ಹಾಕಿಸುವ ಮೂಲಕ ಈ ಕಾಯಿಲೆಯನ್ನು ನಿಯಂತ್ರಿಸಬಹುದು' ಎಂದು ಸಲಹೆ ನೀಡಿದರು.
- 'ಕೈಗಾರಿಕೀಕರಣದಿಂದ ವ್ಯಾಪಕ ಪ್ರಮಾಣದಲ್ಲಿ ಕೊಳಚೆ ನೀರು ಉತ್ಪಾದನೆಯಾಗುತ್ತಿದೆ. ಬೆಂಗಳೂರಿನಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿ ಪಕ್ಕದ ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕೆರೆಗಳಿಗೆ ಹರಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ, ತೃತೀಯ ಹಂತದ ಸಂಸ್ಕರಣೆ ಮಾಡಿದ ಬಳಿಕವಷ್ಟೇ ಕೆರೆಗಳಿಗೆ ಈ ನೀರನ್ನು ಹರಿಸಬೇಕು. ಆದರೆ, ದ್ವಿತೀಯ ಹಂತದ ಸಂಸ್ಕರಣೆ ಮಾಡಿ ಕೆರೆಗಳಿಗೆ ಬಿಡಲಾಗುತ್ತಿದೆ. ಇದರಿಂದ ತರಕಾರಿಗಳು ವಿಷಮಯ ವಾಗುತ್ತಿದೆ ಕೊಳವೆಬಾವಿಗಳ ನೀರು ಪರಿಶುದ್ಧವಾಗಿಲ್ಲ, ಎರಡನೇ ಹಂತದ ಸಂಸ್ಕರಣಾ ಘಟಕಗಳನ್ನು ಮೂರನೇ ಹಂತಕ್ಕೆ ಮೇಲ್ದರ್ಜೆಗೆ ಏರಿಸಲು ಜಲಶಕ್ತಿ ಹಾಗೂ ಪರಿಸರ ಸಚಿವಾಲಯಗಳು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

## ❖ ಪ್ಯಾರಾ ಅಥ್ಲೆಟಿಕ್ಸ್: ಪಾಲ್‌ಗೆ ಚಿನ್ನ

**ಸಂದರ್ಭ: ಪ್ಯಾರಾಲಿಂಪಿಕ್ಸ್ ಅವಳಿ ಪದಕ ವಿಜೇತೆ ಪ್ರೀತಿ ಪಾಲ್ ಅವರು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರಾನ್‌ಪ್ರಿ ಮಹಿಳೆಯರ 200 ಮೀಟರ್ ಓಟದಲ್ಲಿ ಚಿನ್ನದ ಸಾಧನೆ ಮೆರೆದರು.**

- ಆತಿಥೇಯ ದೇಶದ ಕ್ರೀಡಾಪಟುಗಳು ಕೂಟದಲ್ಲಿ ಒಟ್ಟು 208 ಪದಕಗಳನ್ನು ಜಯಿಸುವ ಮೂಲಕ ಅಮೋಘ ಸಾಧನೆ ಮಾಡಿದರು. ಅದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚಿನ ಪದಕಗಳು ಸೇರಿವೆ.
- ಕೊನೆಯ ದಿನದ ಆಕರ್ಷಣೆ ಯಾಗಿದ್ದ ಪ್ರೀತಿ 200 ಮೀಟರ್ (ಟಿ35-ಟಿ37 ವಿಭಾಗ) ಓಟವನ್ನು 30.26 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಮೀರತ್‌ನ 25 ವರ್ಷದ ಪ್ರೀತಿ ಗುರುವಾರ 100 ಮೀಟರ್ ಓಟದಲ್ಲೂ ಸ್ವರ್ಣ ಸಾಧನೆ ಮಾಡಿದ್ದರು. ರಷ್ಯಾದ ಕರೀನಾ ಮಚುಲ್ಕಾಯಾ (32.227) ಬೆಳ್ಳಿ ಪದಕ ಗೆದ್ದರು ಭಾರತದ ಬಿನಾ ಶಂಭುಭಾ (32.35 ಸೆ) ಕಂಚಿನ ಪದಕ ಜಯಿಸಿದರು.
- ಕೂಟದಲ್ಲಿ ರಷ್ಯಾ ಒಟ್ಟು 35 (15 ಚಿನ್ನ, 14 ಬೆಳ್ಳಿ ಮತ್ತು 6 ಕಂಚು) ಪದಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.



ಪ್ರೀತಿ ಪಾಲ್ ಪಿಟಿಐ ಚಿತ್ರ

-----------------------------------------ಶುಭವಂದನೆಗಳು-----------------------------------------

Dr. Rajkumar IAS/KAS Academy